01ಅಕ್ಟೋಬರ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 202 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ





ನಾಡಹಬ್ಬ ದಸರಾ ಒಂದೇಯಾದರೂ ಆಚರಣೆಗಳಲ್ಲಿ ಮಾತ್ರ ನಾನಾ ವಿಧ ! » 2


ಭಾರತ ವಿದೇಶಗಳಿಂದ ಪಡೆದ ಸಾಲದ ಮೊತ್ತ 66.36 ಲಕ್ಷ ಕೋಟಿಗೆ ಏರಿಕೆ » 3


ದಾಖಲೆಗಾಗಿ ಸರ್ಕಾರಿ ಶಾಲೆಗಳ ಪರದಾಟ » 4

# ಉತ್ತರ ಪ್ರವಾಹ: ಸಿಎಂ ವೈಮಾನಿಕ ಸಮೀಕ್ಷೆ

## ಎನ್‌ಡಿಆರ್‌ಎಫ್ ಜೊತೆ ಹೆಚ್ಚುವರಿ ಪ್ಯಾಕೇಜ್ | ಸಿದ್ದರಾಮಯ್ಯ ಘೋಷಣೆ

• ಪ್ರಜೋದಯ ವರದಿ

**ಬೆಂಗಳೂರು:** ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಸಂಭವಿಸಿದ ಅತಿವೃಷ್ಟಿಯಿಂದ ನಷ್ಟಕ್ಕೀಡಾಗಿರುವ ಬೆಳೆ ಹಾನಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎನ್‌ಡಿಆರ್‌ಎಫ್ ಜೊತೆಗೆ ಹೆಚ್ಚುವರಿ ಪರಿಹಾರ ಘೋಷಿಸಿದ್ದಾರೆ.

ಕಲಬುರಗಿ, ಬೀದರ್, ಯಾದಗಿರಿ ಹಾಗು ವಿಜಯಪುರ ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಹಾನಿಗೀಡಾಗಿರುವ ಸ್ಥಳವನ್ನು ಮಂಗಳವಾರ ವೈಮಾನಿಕ ಸಮೀಕ್ಷೆ ಮೂಲಕ ಪರಿಶೀಲಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ, ಕೇಂದ್ರ ಸರ್ಕಾರದ ಎನ್‌ಡಿಆರ್‌ಎಫ್ ಪರಿಹಾರದ ಜೊತೆಗೆ ರಾಜ್ಯಸರ್ಕಾರವೂ ಪರಿಹಾರ ನೀಡುತ್ತದೆಂದು ಘೋಷಿಸಿದರು. ಎನ್‌ಡಿಆರ್‌ಎಫ್ ನಿಯಮದ ಪ್ರಕಾರ ಕುಷ್ಕಿ ಜಮೀನಿಗೆ ಪ್ರತಿ ಹೆಕ್ಟೇರ್‌ಗೆ 8,500 ರೂ., ನೀರಾವರಿ ಜಮೀನಿಗೆ 17 ಸಾವಿರ ರೂ., ಬಹುವಾರ್ಷಿಕ ಬೆಳೆಗೆ 22,500 ರೂ. ಇದೆ. ಈ ಹಣ ಸಮೀಕ್ಷೆ ಮುಗಿದ ತಕ್ಷಣ ಬಿಡುಗಡೆ ಆಗುತ್ತದೆ. ಎನ್‌ಡಿಆರ್‌ಎಫ್ ಹಣದ ಜೊತೆಗೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಪ್ರತಿ ಹೆಕ್ಟೇರ್‌ಗೆ 8,500 ರೂ. ಪರಿಹಾರ ಕೊಡುತ್ತದೆ. ಅದರಿದ ಕುಷ್ಕಿ ಜಮೀನಿಗೆ ಪ್ರತಿ ಹೆಕ್ಟೇರ್‌ಗೆ ರಾಜ್ಯ ಸರ್ಕಾರ 8500 ರೂ., ನೀರಾವರಿಗೆ 8500 ರೂ. ಹಾಗು ಬಹುವಾರ್ಷಿಕ ಬೆಳೆಗೆ 8500 ರೂ. ಹೆಚ್ಚುವರಿಯಾಗಿ ಕೊಡಲಾಗುವುದೆಂದರು.



> ನೆರೆ ಪ್ರದೇಶಗಳ ಬಗ್ಗೆ ರಾಜ್ಯ ಸರ್ಕಾರ ಹೊಣೆಗಾರಿಕೆ ಇಲ್ಲದಂತೆ ವರ್ತಿಸುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರನ್ನು ಎಸಿ ಕೋಣೆಯಿಂದ ಹೊರಗೆ ಹಾಕಿ, ನೆರೆ ಪೀಡಿತ ಪ್ರದೇಶಕ್ಕೆ ಭೇಟಿ ನೀಡುವಂತೆ ಮುಖ್ಯಮಂತ್ರಿ ಸೂಚಿಸಬೇಕು.
> -ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಪ್ರವಾಹದಿಂದ ಬೆಳೆ ಜೊತೆಗೆ ಮೂಲ ಸೌಕರ್ಯಗಳು ಅಪಾರ ಪ್ರಮಾಣದಲ್ಲಿ ಹಾನಿ ಆಗಿರುವುದರಿಂದ ರಾಜ್ಯಕ್ಕೆ ಪರಿಹಾರ ಒದಗಿಸು ವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾ ಗುವುದು. ವೈಮಾನಿಕ ಸಮೀಕ್ಷೆ ಬಳಿಕ ಶಾಸಕರು, ಅಧಿಕಾರಿಗಳ ಜೊತೆ ಸುದೀರ್ಘ ಚರ್ಚೆ ನಡೆಸಿ ನಾಲ್ಕು ಜಿಲ್ಲೆಗಳ ಪರಿಸ್ಥಿತಿ ಅವಲೋಕಿಸಿದ್ದೇನೆ. 117 ಗ್ರಾಮಗಳು ಸಂಕಷ್ಟಕ್ಕೆ ಸಿಲುಕಿವೆ. ಸಂತ್ರಸ್ತರ ನೆರವಿಗಾಗಿ 80 ಕಾಳಜಿ ಕೇಂದ್ರ ತೆರೆಯಲಾಗಿ ದೆಯೆಂದರು.

ಧಾರಾಕಾರ ಮಳೆಯಿಂದ ರಾಜ್ಯದಲ್ಲಿ 10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಆಗಿರುವ ಅಂದಾಜಿದೆ. ಈ ಪ್ರಮಾಣ ಇನ್ನೂ ಹೆಚ್ಚಾಗಬಹುದು. ಜಂಟಿ ಸಮೀಕ್ಷೆ ಪೂರ್ಣವಾದ ಬಳಿಕ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸದ್ಯ 5 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಜಂಟಿ ಸಮೀಕ್ಷೆ ಮುಗಿದಿದೆ ಎಂದರು.

» ನಾಲ್ಕನೇ ಪುಟದಲ್ಲಿ

### ಕಳೆದ ವರ್ಷಕ್ಕಿಂತ ಹೆಚ್ಚುವರಿ ಮಳೆ

ಕಳೆದ ವರ್ಷ ಶೇ. 22 ಹಾಗು ಈ ವರ್ಷ ಶೇ.26 ರಷ್ಟು ಹೆಚ್ಚು ಅಧಿಕ ಮಳೆಯಾಗಿದೆ. ಅಗತ್ಯ ಇರುವ ಕಡೆ ತಾತ್ಕಾಲಿಕ, ಶಾಶ್ವತ ತಡೆಗೋಡೆ ಕಟ್ಟಿಸಿ ಅನಾಹುತದ ಪ್ರಮಾಣ ತಪ್ಪಿಸಲು ಸೂಚಿಸಲಾಗಿದೆಯೆಂದು ಸಿದ್ದರಾಮಯ್ಯ ವಿವರಿಸಿದರು.

ರಾಜ್ಯದಲ್ಲಿ ಪ್ರಾಥಮಿಕ ಅಂದಾಜಿನ ಪ್ರಕಾರ ಇದುವರೆಗೆ ಸುಮಾರು 9,60,578 ಹೆಕ್ಟೇರ್ ಬೆಳೆ ಹಾನಿಯಾಗಿದೆ. ಅದರಲ್ಲಿ 8,88,953 ಹೆಕ್ಟೇರ್ ಕೃಷಿ ಬೆಳೆ ಮತ್ತು 71,624 ಹೆಕ್ಟೇರ್ ತೋಟಗಾರಿಕಾ ಬೆಳೆ ನಷ್ಟಕ್ಕೀಡಾಗಿದೆ. ಇದುವರೆಗಿನ ಮಾಹಿತಿ ಪ್ರಕಾರ ರಾಜ್ಯದಲ್ಲಿ 9,60,578 ಹೆ.ಬೆಳೆ ಹಾನಿಯಾಗಿದ್ದರೆ, ಉತ್ತರ ಕರ್ನಾಟಕದ 8 ಜಿಲ್ಲೆಗಳಲ್ಲಿಯೇ 9,03,966 ಹೆ. ಹಾನಿ ಸಂಭವಿಸಿದೆ. ಶೇ.95 ರಷ್ಟು ಹಾನಿ ಈ ಜಿಲ್ಲೆಗಳಲ್ಲಿಯೇ ಸಂಭವಿಸಿದೆ ಎಂದರು.

# ಸಂಪುಟ ಪುನಾರಚನೆ ಮತ್ತೆ ಮುನ್ನಲೆಗೆ

## ಅಕ್ಟೋಬರ್ ಕ್ರಾಂತಿ ಪಕ್ಕಾ ಎಂದ ಅಶೋಕ್: ವಿಸ್ತರಣೆ ಸಿಎಂ ವಿವೇಚನೆ-ಪರಮೇಶ್ವರ್

• ಪ್ರಜೋದಯ ವರದಿ

**ಬೆಂಗಳೂರು:** ಸಚಿವ ಸಂಪುಟ ಪುನಾರಚನೆ ಕುರಿತಾಗಿ ಸಿದ್ದರಾಮಯ್ಯ ಅವರ ಆಪ್ತ ಸಚಿವ ಜಮೀರ್ ಅಹ್ಮದ್ ಖಾನ್ ನೀಡಿರುವ ಹೇಳಿಕೆ ಕೋಲಾಹಲಕ್ಕೆ ಎಡೆಮಾಡಿ ಕೊಟ್ಟಿದೆ. ಸಚಿವರ ಹೇಳಿಕೆಗೆ ಡಾ.ಜಿ.ಪರಮೇಶ್ವರ್ ಮತ್ತು ವಿಪಕ್ಷ ನಾಯಕ ಆರ್.ಅಶೋಕ್ ಕೂಡಾ ಪ್ರತಿಕ್ರಿಯೆ ನೀಡಿದ್ದಾರೆ. ಅಶೋಕ್ ಒಂದು ಹೆಜ್ಜೆ ಮುಂದಕ್ಕೆ ಹೋಗಿ, ಸಚಿವರಷ್ಟೇ ಅಲ್ಲ, ಮುಖ್ಯಮಂತ್ರಿ ಬದಲಾವಣೆಯೂ ಫಿಕ್ಸ್ ಎಂದಿದ್ದಾರೆ. ಈ ಮೂಲಕ ಜಮೀರ್ ನೀಡಿರುವ ಸಂಪುಟ ಪುನಾರಚನೆ ಹೇಳಿಕೆ ರಾಜಕೀಯ ವಲಯದಲ್ಲಿ ಚರ್ಚೆ ಸೃಷ್ಟಿಸಿದೆ.

ಸಚಿವ ಸಂಪುಟ ಪುನಾರಚನೆ ಬಗ್ಗೆ ವಿಪಕ್ಷಗಳ ನಾಯಕ ಆರ್.ಅಶೋಕ್ ಅವರು ಟಾಂಗ್ ನೀಡಿ, ಅಕ್ಟೋಬರ್ ಕ್ರಾಂತಿ ಬಗ್ಗೆ ಭವಿಷ್ಯ ನುಡಿದರು. ಇದು ತಂತ್ರ ಇಲ್ಲದೇ ನಡೀತಿರುವ ಅತಂತ್ರ ಸರ್ಕಾರ. ಜಮೀರ್ ಹೇಳಿಕೆ ಅಕ್ಟೋಬರ್ ಕ್ರಾಂತಿ ಆಗೋದರ ಸುಳಿವು. ಒಬ್ಬೊಬ್ಬರು ಒಂದೊಂದು ಹೇಳಿಕೆ ಕೊಡುತ್ತಿದ್ದಾರೆ. ಅಕ್ಟೋಬರ್ ಕ್ರಾಂತಿ ಆಗೋದು ಪಕ್ಕಾ. ಕ್ರಾಂತಿ ಬಗ್ಗೆ ಮಾತಾಡೋರೆಲ್ಲ ಹೋಗುದ್ದಾರೆ, ರಾಜಣ್ಣ ವಜಾ ಆದರು. ಅಕ್ಟೋಬರ್ ಕ್ರಾಂತಿ ಆಗೋದು ಖಚಿತ. ಸರ್ಕಾರ ಬಿದ್ದು ಹೋದರೆ ನಾವು ಪ್ರಜಾಪ್ರಭುತ್ವ ಮಾದರಿಯಲ್ಲಿ ಚುನಾವಣೆಗೆ ಹೋಗುತ್ತೇವೆ ಎಂದಿದ್ದಾರೆ.

ಇದೇ ವಿಚಾರವಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾತನಾಡಿ, ಸಂಪುಟ ಪುನಾರಚನೆ ಅಥವಾ ವಿಸ್ತರಣೆ ಮಾಡೋದು ಮುಖ್ಯಮಂತ್ರಿ ವಿವೇಚನೆಗೆ ಬಿಟ್ಟ ವಿಚಾರ. ಇದೆಲ್ಲ ನಮ್ಮ ವ್ಯಾಪ್ತಿಗೆ ಬರೋದಿಲ್ಲ, ನಮಗೆ ಗೊತ್ತೇ ಆಗೋದಿಲ್ಲ. ಕೆಲವರು ಅವರವರ ಅಭಿಪ್ರಾಯ ಹೇಳುತ್ತಾರೆ. ಎರಡೂವರೆ ವರ್ಷಕ್ಕೆ ಸಂಪುಟ ಪುನಾರಚನೆ ಆಗಬೇಕು ಅಂತ ಹೇಳ್ಕೊಂಡು ಬರ್ತಿದ್ದಾರಲ್ಲ ಇದರ ಬಗ್ಗೆ ನಮ ಗ್ಯಾರಿಗೂ ಗೊತ್ತೇ ಇಲ್ಲ ಎಂದರು. ಹೈಕಮಾಂಡ್ ನವರು ಯಾರೂ ಹೇಳಿಲ್ಲ, ಅಥವಾ ಸಿಎಂ ಆಗಲೀ ಅಧ್ಯಕ್ಷರಾಗಲೀ ನಮಗೆ ಇದರ ಬಗ್ಗೆ ಹೇಳಿಲ್ಲ. ಒಳಗೆ ಅವರು ಏನು ಅಂಡರ್ ಸ್ಟ್ಯಾಂಡಿಂಗ್‌ಗೆ ಬಂದಿದ್ದಾರೋ ಗೊತ್ತಿಲ್ಲ ಎಂದು ತಿಳಿಸಿದರು.



**ಸುಳಿವು ನೀಡಿದ್ದ ಸಲೀಂ**

ವಿಧಾನಪರಿಷತ್ ಸದಸ್ಯ ಸಲೀಂ ಅಹ್ಮದ್ ಮಾತನಾಡಿ, ನವೆಂಬರ್‌ಗೆ ಸರ್ಕಾರಕ್ಕೆ ಎರಡುವರೆ ವರ್ಷ ಆಗುತ್ತದೆ. ಶೇ.50 ರಷ್ಟು ಸಚಿವರಿಗೆ ಪಕ್ಷದ ಜವಾಬ್ದಾರಿ ನೀಡಿ ಸಂಪುಟ ಪುನಾರಚನೆ ಆಗಬೇಕು. ಅದರಲ್ಲಿ ಹೊಸಬರಿಗೆ ಅವಕಾಶ ನೀಡಬೇಕೆಂಬ ಬೇಡಿಕೆ ಇಟ್ಟಿದ್ದೇವೆ. ನವೆಂಬರ್‌ನಲ್ಲಿ ಸಂಪುಟ ಪುನಾರಚನೆ ಆಗಬಹುದೆಂಬ ನಿರೀಕ್ಷೆ ವ್ಯಕ್ತಪಡಿಸಿದ್ದರು.

# ಸ್ಫೋಟ ಸ್ಥಳಕ್ಕೆ ಸಂಸದ, ಶಾಸಕ ಭೇಟಿ



• ಪ್ರಜೋದಯ ವರದಿ

**ಆಲೂರು:** ಬಿಕ್ಕೋಡು ರಸ್ತೆಯ ಹಳೇ ಆಲೂರು ಗ್ರಾಮದಲ್ಲಿ ಸಿಡಿಮದ್ದು ಸ್ಫೋಟವಾಗಿರುವ ಸ್ಥಳಕ್ಕೆ ಸಂಸದ ಶ್ರೇಯಸ್ ಪಟೇಲ್, ಶಾಸಕ ಸಿಮೆಂಟ್ ಮಂಜು ಅವರು ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಸಂಸದರು, ಘಟನೆಗೆ ನಿಜ ಕಾರಣ ಏನೆಂಬುದರ ಬಗ್ಗೆ ತನಿಖೆ ಆರಂಭ ಆಗಿದೆ. ವರದಿ ಪರಿಶೀಲಿಸಿ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಲಿದೆ. ಘಟನೆಯಿಂದ ಸುತ್ತ ಮುತ್ತಲಿನ ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದು, ಧೈರ್ಯದಿಂದ ಇರುವಂತೆ ಇದೇ ತಿಳಿಸಿ, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿಸಲಾಗಿದೆ. ಘಟನೆಯಲ್ಲಿ ಮೂವರು ಗಾಯಗೊಂಡಿದ್ದು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳು ಬೇಗ ಗುಣಮುಖರಾಗಲೆಂದು ಆಶಿಸಿಸುತ್ತೇನೆಂದರು.

# ಸಿಡಿಮದ್ದು ಸ್ಫೋಟ: ದಂಪತಿ ಸ್ಥಿತಿ ಚಿಂತಾಜನಕ

## ಕಲ್ಲುಬಂಡೆ ಸ್ಫೋಟಕ್ಕೆ ಬಳಸುವ ವಸ್ತುಗಳು ಪತ್ತೆ | ಅಕ್ರಮ ಸ್ಫೋಟಕ ಸಿದ್ಧಪಡಿಸುತ್ತಿದ್ದ ವೇಳೆ ಅವಘಡದ ಅನುಮಾನ

• ಪ್ರಜೋದಯ ವರದಿ

**ಆಲೂರು:** ಹಳೇ ಆಲೂರು ಪಟ್ಟಣದಲ್ಲಿ ಕಲ್ಲುಬಂಡೆ ಸ್ಫೋಟಕ್ಕೆ ಬಳಸುವ ವಸ್ತುಗಳನ್ನು ಅಕ್ರಮವಾಗಿ ಮನೆಯಲ್ಲಿ ಸಂಗ್ರಹಿಸಿದ್ದ ವೇಳೆ ಆಕಸ್ಮಿಕ ಬೆಂಕಿ ತಗುಲಿ ಸ್ಫೋಟಗೊಂಡು ಗಂಭೀರವಾಗಿ ಗಾಯಗೊಂಡ ದಂಪತಿ ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ಮಗುವೊಂದು ಗಾಯಗೊಂಡು ಪ್ರಾಣಾಪಾಯದಿಂದ ಪಾರಾಗಿದೆ.

ಸುದರ್ಶನ್ ಆಚಾರ್ (32), ಕಾವ್ಯ (27) ಹಾಗು ಒಂದು ಮಗು ವಿಗೆ ಗಾಯಗೊಂಡಿದೆ. ಸ್ಫೋಟದ ರಭಸಕ್ಕೆ ಮನೆಗೆ ಸಂಪೂರ್ಣ ಹಾನಿ ಯಾಗಿದೆ.

ಸೋಮವಾರ ರಾತ್ರಿ ಸ್ಫೋಟ ಸಂಭವಿಸಿದ್ದು ಗಾಯಾಳುಗಳಿಗೆ ಹಾಸನದ ಹಿಮ್ಸ್ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಝೀರೋ ಟ್ರಾಫಿಕ್‌ನಲ್ಲಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆ ದೊಯ್ದು ಚಿಕಿತ್ಸೆ ಕೊಡಿಸಲಾಗುತ್ತಿದೆ. ಸುದರ್ಶನ್‌ಗೆ ಸುಟ್ಟಗಾಯವಾಗಿದ್ದು, ಕಾವ್ಯ ಅವರ ಎರಡೂ ಕಾಲುಗಳು ಛಿದ್ರವಾಗಿದ್ದು ಗಾಯಾಳುಗಳ ಸ್ಥಿತಿ ಚಿಂತಾಜನಕವಾಗಿದೆ. ಸ್ಫೋಟಗೊಂಡ ಸಂದರ್ಭದಲ್ಲಿ ಮನೆ ಛಾವಣಿಗೆ ಹೊರಿಸಲಾಗಿದ್ದ ಶೀಟ್‌ಗಳು ಹಾರಿ ಹೋಗಿ ಮರದ ಮೇಲೆ ಬಿದ್ದಿದೆ.



ಸ್ಫೋಟಗೊಂಡ ಸ್ಥಳಕ್ಕೆ ಪೊಲೀಸ್ ಇನ್‌ಸ್ಪೆಕ್ಟರ್ ಮೋಹನರೆಡ್ಡಿ, ಸಬ್‌ಇನ್ಸ್‌ಪೆಕ್ಟರ್ ಪ್ರವೀಣ್‌ಕುಮಾರ್ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ತಡರಾತ್ರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹ ಮದ್ ಸುಜೀತಾ, ಎಎಸ್ಪಿ ತಮ್ಮಯ್ಯ, ಡಿವೈಎಸ್ಪಿ ಪ್ರಮೋದ್ ಕುಮಾರ್ ಭೇಟಿ ನೀಡಿದರು. ಘಟನೆ ಬಗ್ಗೆ ಸುದರ್ಶನ್ ಅವರ ತಂದೆ ಮೋಹನ್ ದೂರು ನೀಡಿ, ರಾತ್ರಿ 8.30ರ ಸುಮಾ ರಿಗೆ ಮಗ-ಸೊಸೆ ಕೆಲಸ ಮಾಡುವಾಗ ಸಿಲಿಂಡರ್ ಸ್ಫೋಟಗೊಂಡಿದೆ ಎಂದು ತಿಳಿಸಿದ್ದರು. ಆದರೆ, ಮನೆಯಲ್ಲಿದ್ದ ಎರಡು ಸಿಲಿಂಡರ್ ಹಾಗು ಗೀಸರ್ ಮೊದಲಿನಂತೆಯೇ ಇದ್ದು, ಸ್ಫೋಟಕ್ಕೆ ಕಾರಣವೇನು ಎಂಬುದು ನಿಗೂಢತೆ ಎಲ್ಲರನ್ನೂ ಕಾಡುತ್ತಿತ್ತು. ಆದರೀಗ ಸಿಡಿಮದ್ದು ತಯಾರಿಕೆ ಮಾಡುತ್ತಿದ್ದ

» ನಾಲ್ಕನೇ ಪುಟದಿಂದ

### ಸಿಡಿಮದ್ದು ತಯಾರಿಸುತ್ತಿದ್ದ ದಂಪತಿ

ಈ ದಂಪತಿ ಮನೆಯಲ್ಲೇ ಸಿಡಿಮದ್ದು ತಯಾರಿಸುತ್ತಿದ್ದರು. ಅದಕ್ಕಾಗಿ ಬೇಕಿದ್ದ ಮದ್ದನ್ನು ಸಂಗ್ರಹಿಸಿದ್ದರು. ಸಿಡಿಮದ್ದಿಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಸ್ಫೋಟಗೊಂಡಿದೆ ಎಂಬ ಮಾಹಿತಿ ತನಿಖೆಯಿಂದ ಲಭ್ಯವಾಗಿದೆ. ಹೀಗಾಗಿ ಮನೆಯ ಸುತ್ತ ಪೊಲೀಸ್ ಭದ್ರತೆ ನೀಡಲಾಗಿದೆ.

ಬಂಡೆ ಸಿಡಿಸುವ ಸಿಡಿಮದ್ದಿನಿಂದಲೇ ಘಟನೆ ಸಂಭವಿಸಿದೆ, ಮಾತ್ರವಲ್ಲ ಈ ದಂಪತಿ ಅನಧಿ ಕೃತವಾಗಿ ಮನೆಯಲ್ಲಿ ಸಿಡಿಮದ್ದು ಮಾರಾಟ ಮಾಡುತ್ತಿದ್ದರು ಎಂಬ ಮಾಹಿತಿ ಕೂಡ ತಿಳಿದುಬಂದಿದೆ.

ಸುದರ್ಶನ್ ಬಾಷ್ ಕಂಪೆನಿ ಮತ್ತು ಮರಗೆಲಸ ಮಾಡುತ್ತಿದ್ದರು. ಅದರ ಜೊತೆಯಲ್ಲಿ ದೀಪಾವಳಿ, ದಸರಾ ಹಬ್ಬಗಳ ಸಂದರ್ಭದಲ್ಲಿ ಭಾರೀ ಸ್ಫೋಟಗಳ ಪಟಾಕಿಗಳನ್ನು ತಯಾರಿಸುತ್ತಿದ್ದರು. ಕಲ್ಲು ಬಂಡೆಗಳನ್ನು ಸ್ಫೋಟಿಸಲು ಅಕ್ರಮವಾಗಿ ಸ್ಫೋಟಕಗಳನ್ನು ಸಿದ್ಧಪಡಿಸಿ ಕೊಡುತ್ತಿದ್ದರು ಎಂಬುದು ತಿಳಿದುಬಂದಿದೆ.

# ಇಂದು ಎಂಇಐಎಫ್ ಘಟಕ-ಕಚೇರಿ ಉದ್ಘಾಟನೆ

• ಪ್ರಜೋದಯ ವರದಿ

**ಹಾಸನ:** ಮುಸ್ಲಿಂ ಶೈಕ್ಷಣಿಕ ಸಂಸ್ಥೆಗಳ ಒಕ್ಕೂಟ (ಎಂಇಐಎಫ್) ಜಿಲ್ಲಾ ಕಚೇರಿ ಉದ್ಘಾಟನಾ ಸಮಾರಂಭ ನಗರದ ಶರೀಫ್ ಕಾಲೋನಿಯ ಖುಬಾ ಕನ್ವೆನ್ಷನ್ ಹಾಲ್‌ನಲ್ಲಿ ಅ.1ರ ಬುಧವಾರ ಬೆಳಿಗ್ಗೆ 10.30ಕ್ಕೆ ನೆರವೇರಲಿದೆ.

ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸಮಾರಂಭ ಉದ್ಘಾಟಿಸುವರು. ಎಂಇಐಎಫ್ ಘಟಕ ಉದ್ಘಾಟನೆಯನ್ನು ಉಮರ್ ಟೀಕೆ ನೆರವೇರಿಸುವರು. ಶಾಸಕ ಹೆಚ್.ಪಿ.ಸ್ವರೂಪ್, ಚಿಕ್ಕಮಗಳೂರು ಉಪ ಅರಣ್ಯಸಂರಕ್ಷಣಾಧಿಕಾರಿ ಸೈಯದ್ ಅಹಮದ್ ಶಾ ಹುಸೈನಿ, ಅಬಕಾರಿ ಇಲಾಖೆ ನಿವೃತ್ತ ಉಪ ಆಯುಕ್ತ ನೂರ್ ಮೊಹಮ್ಮದ್‌ಹುಸ್ಸೈನ್, ಸೈಯದ್‌ತಾಜ್, ಡಾ॥ಅಬ್ದುಲ್ ಬಷೀರ್ ಭಾಗವಹಿಸಲಿದ್ದಾರೆ.

# ಬೆಲೆ ಏರಿಕೆ ನಡುವೆ ಪೂಜಾ ಸಾಮಾಗ್ರಿ, ಖರೀದಿ ಜೋರು

• ಪ್ರಜೋದಯ ವರದಿ

**ಹಾಸನ:** ನಗರ ಸೇರಿ ಜಿಲ್ಲಾದ್ಯಂತ ಆಯುಧ ಪೂಜೆ ಹಾಗು ವಿಜಯ ದಶಮಿ ಹಬ್ಬದ ಸಿದ್ಧತೆ ಜೋರಾಗಿ ನಡೆದಿದ್ದು ಬೆಲೆ ಏರಿಕೆ ನಡುವೆಯೂ ಮಂಗಳವಾರ ಹಬ್ಬದ ಸಾಮಾಗ್ರಿ ಖರೀದಿ ಜೋರಾಗಿತ್ತು.

ನಗರದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿಗೆ ಮುಂದಾದರು. ಕೆಲವು ಕಡೆಗಳಲ್ಲಿ ವಾಹನ ಸಂಚಾರದಲ್ಲಿ ಅಸ್ತವ್ಯಸ್ತವಾಯಿತು. ಮಹಾವೀರ ವೃತ್ತ, ಕಟ್ಟಿನಕೆರೆ ಮಾರುಕಟ್ಟೆ, ಸುಭಾಷ್ ಚೌಕ, ತಣ್ಣೀರುಹಳ್ಳದ ರಸ್ತೆ ಬದಿಯಲ್ಲಿ ವ್ಯಾಪಾರ ವಹಿವಾಟು ನಡೆಸಿದ್ದರಿಂದ ವಾಹನ ಸಂಚಾರಕ್ಕೆ ತೊಂದರೆ ಯಾಯಿತು.

**ಖರೀದಿ ಜೋರು**

ಹಬ್ಬದ ಹಿನ್ನಲೆ ಹೂವು, ಹಣ್ಣಿನ ಬೆಲೆಯಲ್ಲಿ ಏರಿಕೆ ಕಂಡಿತು. ಬೆಳಿಗ್ಗೆಯಿಂದಲೇ ಜನರು ಮಾರುಕಟ್ಟೆಯತ್ತ ಬಂದರು. ನಗರದ ಮಹಾವೀರ ವೃತ್ತ, ಸುಭಾಷ್ ಚೌಕ, ತಣ್ಣೀರುಹಳ್ಳ, ರೈಲ್ವೆ ನಿಲ್ದಾಣ, ಜಿಲ್ಲಾ ಕ್ರೀಡಾಂಗಣ ಮುಂಭಾಗ, ರಿಂಗ್ ರಸ್ತೆ, ಡೇರಿ ವೃತ್ತ ಸೇರಿ ಮುಂತಾದ ಕಡೆ ರಸ್ತೆ ಬದಿ ವ್ಯಾಪಾರ ನಡೆಯಿತು. ಬೂದುಗುಂಬಳ ಹಾಗು ಹೂವಿನ ಹಾರಗಳು ಯತೇಚ್ಛ ಪ್ರಮಾಣದಲ್ಲಿ ಮಾರಾಟವಾದ್ದರಿಂದ ವ್ಯಾಪಾರಿಗಳು ರಸ್ತೆಗೆ ನಿಂತು ವ್ಯಾಪಾರದಲ್ಲಿ ತೊಡಗಿದ್ದ ದೃಶ್ಯ ಕಂಡುಬಂತು.



ಒಂದು ಮಾರು ಚೆಂಡು ಹೂವು ಬೆಲೆ 60 ರೂ., ಸೇವಂತಿ 80 ರಿಂದ 120 ರೂ., ಬೂದುಗುಂಬಳ ಕೆ.ಜಿ.ಗೆ 20 ರಿಂದ 40 ರೂ. ವರೆಗೆ ಮಾರಾಟ ಮಾಡಲಾಯಿತು. ಸೇಬು ಕೆ.ಜಿ.ಗೆ 150 ರೂ., ಕಿತ್ತಳೆ ಹಣ್ಣು ಒಂದೂವರೆ ಕೆ.ಜಿ.ಗೆ 100 ರೂ., ಮೂಸಂಬಿ 100 ರೂ., ದಾಳಿಂಬೆ 150 ರೂ., ಬಾಳೆಹಣ್ಣು ಕೆ.ಜಿ.ಗೆ 120 ರೂ., ಬಾಳೆಕಂದು ಜೋಡಿಗೆ 20 ರಿಂದ 40ರೂ., ಕಬ್ಬಿನ ಜಲ್ಲೆ ಜೋಡಿಗೆ 20 ರೂ. ಮಾವಿನ ಸೊಪ್ಪು ಒಂದು ಕಟ್ಟಿಗೆ 10 ರೂ.ನಂತೆ ಮಾರಾಟವಾಯಿತು.

# ಪತ್ರಕರ್ತರ ನಿಸ್ವಾರ್ಥ ಸೇವೆ ಶ್ಲಾಘನೀಯ: ಶಾಸಕ ಸ್ವರೂಪ್

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಒಗ್ಗಟ್ಟಿನಿಂದ ಮುನ್ನಡೆಯುತ್ತಿದ್ದು ನಿಸ್ವಾರ್ಥ ಸೇವೆಯೊಂದಿಗೆ ಸಮಾಜಕ್ಕೆ ತಮ್ಮದೇಯಾದ ಕೊಡುಗೆ ನೀಡುತ್ತಿರುವುದು ಶ್ಲಾಘನೀಯವೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನೂತನವಾಗಿ ನಿರ್ಮಿಸಿರುವ ಡಿ.ವಿ.ಜಿ. ಸಭಾಂಗಣ ಉದ್ಘಾಟಿಸಿ ಮಂಗಳವಾರ ಮಾತನಾಡಿದ ಅವರು, ಜಿಲ್ಲಾ ಪತ್ರಕರ್ತರ ಸಂಘಕ್ಕೆ ಬರಲು ಸಂತಸವಾಗುತ್ತದೆ. ಒಗ್ಗಟ್ಟಿನಿಂದ ಇದ್ದೀರಿ, ರಾಜ್ಯ ಸಂಘವು ಸಹ ಜಿಲ್ಲಾ ಸಂಘಗಳನ್ನು ಒಗ್ಗಟ್ಟಿನಿಂದ ಮುನ್ನಡೆಸುತ್ತಾ ಸಾಗುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಸಂಘದ ಕಟ್ಟಡದಲ್ಲಿ ನೂತನವಾಗಿ ಡಿವಿಜಿ ಸಭಾಂಗಣ ನಿರ್ಮಾಣವಾಗಿದ್ದು ಅದರ ಸಂಪೂರ್ಣ ವೆಚ್ಚದ ಅನುದಾನವನ್ನು ಶೀಘ್ರದಲ್ಲಿಯೇ ಬಿಡುಗಡೆ ಮಾಡಲಾಗುವುದು. ಜಿಲ್ಲಾ ಸಂಘವು ಇತ್ತೀಚೆಗೆ ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ, ಪತ್ರಕರ್ತರಿಗೆ ಆರೋಗ್ಯ ಶಿಬಿರ ಸೇರಿ ಅನೇಕ ಕಾರ್ಯಕ್ರಮ ಮಾಡಿಕೊಂಡು ಬರುತ್ತಿದೆ. ಮುಂದೆಯೂ ಇದೇ ರೀತಿ ಚಟುವಟಿಕೆಗಳು ನಡೆಯಲಿ ಎಂದು ಶುಭ ಕೋರಿದರು.



ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಪತ್ರಕರ್ತರ ಸಂಘದ ಸಭಾಂಗಣಕ್ಕೆ ಡಿ.ವಿ. ಗುಂಡಪ್ಪ ಅವರ ಹೆಸರು ನಾಮಕರಣ ಮಾಡಿರುವುದು ಸಂತಸ ತಂದಿದೆ. ಗುಂಡಪ್ಪ ಅವರು ರಚಿಸಿರುವ ಮಂಕುತಿಮ್ಮನ ಕಗ್ಗ ಜೀವನೋತ್ಸಾಹಕ್ಕೆ ಪ್ರೇರಣೆ ನೀಡುತ್ತದೆ. ಜಿಲ್ಲೆಯ ಪತ್ರಕರ್ತರು ಕ್ರಿಯಾಶೀಲವಾಗಿ ಉತ್ತಮ ಸ್ಪಂದನೆ, ವೈಚಾರಿಕತೆಗೆ ಪ್ರಾಶಸ್ತ್ಯ ನೀಡುತ್ತಿದ್ದು ಎಲ್ಲರೂ ತಂಡವಾಗಿ ಕೆಲಸ ಮಾಡುತ್ತಿರುವುದು ಸ್ವಾಗತಾರ್ಹವೆಂದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗುಡೂರು ಅವರು ಮಾತನಾಡಿ, ಪತ್ರಕರ್ತರ ಸಂಘವನ್ನು ಮೊದಲ ಬಾರಿಗೆ ಹುಟ್ಟು ಹಾಕಿದ್ದು ಡಿ.ವಿ. ಗುಂಡಪ್ಪ. ನಂತರ ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಖಾದ್ರಿ ಶಾಮಣ್ಣ ಅವರು ಅದಕ್ಕೆ ಕಾರ್ಯನಿರತ

» ನಾಲ್ಕನೇ ಪುಟದಲ್ಲಿ

### ನೂತನ ಅಧ್ಯಕ್ಷರು-ಪದಾಧಿಕಾರಿಗಳ ಆಯ್ಕೆ

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸರ್ವ ಸದಸ್ಯರ ಸಭೆ ಬಳಿಕ ನೂತನ ಪದಾಧಿಕಾರಿಗಳ ಆಯ್ಕೆ ಘೋಷಿಸಲಾಯಿತು. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಹೆಚ್.ಬಿ. ಮದನಗೌಡ ಅವರು, ಮುಂದಿನ ಮೂರು ವರ್ಷಗಳ ಅವಧಿಗೆ ಇಬ್ಬರು ಅಧ್ಯಕ್ಷರ ಆಯ್ಕೆಗೆ ಸಂಘ ತೀರ್ಮಾನಿಸಿದೆಯೆಂದು ಪ್ರಕಟಿಸಿದರು. ಮೊದಲ ಅವಧಿಗೆ ಪ್ರಜೋದಯ ಪತ್ರಿಕೆ ಪ್ರಧಾನ ಸಂಪಾದಕ ಜೆ.ಆರ್. ಕೆಂಚೇಗೌಡ ಅವರನ್ನು ಅಧ್ಯಕ್ಷರಾಗಿ ಹಾಗು ಎರಡನೇ ಅವಧಿಗೆ ನಂಜುಂಡೇಗೌಡ ಅವರು ಅಧ್ಯಕ್ಷರಾಗಲಿ ದ್ದಾರೆಂದರು. ಜೆ.ಆರ್.ಕೆಂಚೇಗೌಡ ಅವರ ಆಡಳಿತಾವಧಿಯಲ್ಲಿ ಉಪಾಧ್ಯಕ್ಷರಾಗಿ ಜಿ. ಪ್ರಕಾಶ್, ಹೆತ್ತೂರು ನಾಗರಾಜ್, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಜಿ.ಸುರೇಶ್, ಕಾರ್ಯದರ್ಶಿ ಸ್ಥಾನಕ್ಕೆ ಬಿ.ಎಂ.ನಂದೀಶ್, ಮಂಜುನಾಥ್, ಬಿ.ಆರ್.ಬೊಮ್ಮೇಗೌಡ ಹಾಗು ಖಜಾಂಚಿಯಾಗಿ ಎಸ್.ಡಿ.ರಂಗಸ್ವಾಮಿ ಅವರು ಆಯ್ಕೆಯಾಗಿದ್ದಾರೆಂದು ಘೋಷಿಸಿದರು.

## ದೇಶದಲ್ಲಿ 140 ಕೋಟಿ ಜನರಿದ್ದರೂ ಉತ್ಪಾದನೆಯಾಗುವ 4 ಲಕ್ಷ ಟನ್ ಕಾಫಿ ಮಾರಾಟಕ್ಕೆ ವಿದೇಶಗಳ ಆಶ್ರಯ

# ಇಂದು ಕಾಫಿ ದಿನಾಚರಣೆ: ಭಾರತೀಯ ಕಾಫಿಗೆ ಬೇಕಿದೆ ಉತ್ತೇಜನ

• ಪ್ರಜೋದಯ ವರದಿ

**ಹಾಸನ:** ನೆರಳಿನಾಶ್ರಯದಲ್ಲಿ ಬೆಳೆಯುವ ಭಾರತದ ಕಾಫಿಯನ್ನು ಉಳಿಸಿ-ಬೆಳೆಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಸಲುವಾಗಿ ಅ.1 ರಂದು 11ನೇ ಅಂತರ ರಾಷ್ಟ್ರೀಯ ಕಾಫಿ ದಿನಾಚರಣೆಯನ್ನು ಹಬ್ಬದ ರೀತಿಯಲ್ಲಿ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಈ ವೇಳೆ ಕಾಫಿ ಬೆಳೆಯ ಸ್ಥಿತ್ಯಂತರದ ಬಗ್ಗೆಯೂ ಚರ್ಚಿಸಲು ವೇದಿಕೆ ಸಿದ್ಧಪಡಿಸಿಕೊಳ್ಳಲಾಗಿದೆ.




ಕರ್ನಾಟಕದ ಸ್ವಿಟ್ಜರ್‌ಲ್ಯಾಂಡ್ ಎಂದೇ ಕರೆಸಿಕೊಳ್ಳುವ ಸಕಲೇಶಪುರ ಪಟ್ಟಣದಲ್ಲಿ ಕಾಫಿ ದಿನಾ ಚರಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಬುಧವಾರ ಬೆಳಿಗ್ಗೆ 10.30ಕ್ಕೆ ಪಟ್ಟಣದ ಸಕಲೇಶ್ವರಸ್ವಾಮಿ ದೇವಸ್ಥಾನದಿಂದ ಬಸವೇಶ್ವರ ಪುತ್ಥಳಿವರೆಗೆ ಕಾಲ್ನಡಿಗೆ ಜಾಥಾ ನಡೆಸಿ, ನಂತರ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಬಳಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಈ ವೇಳೆ 5 ಸಾವಿರ ಕಾಫಿ ಪ್ರಿಯರಿಗೆ ಪರಿಶುದ್ಧವಾದ ಕಾಫಿ ವಿತರಿಸಲು ತಯಾರಿ ನಡೆಸಲಾಗಿದೆ.

**11ನೇ ಕಾಫಿ ದಿನಾಚರಣೆ**

ವಿಶ್ವಸಂಸ್ಥೆ ಘೋಷಿಸಿದ ವಿಶ್ವ ಕಾಫಿ ದಿನಾಚರಣೆ ಇದೀಗ 11ನೇ ವರ್ಷಕ್ಕೆ ಕಾಲಿಡುತ್ತಿದೆ. ಆದರೆ, ಭಾರತದಲ್ಲಿ ವಿವಿಧ ಕಾರಣಗಳಿಂದ ಕಾಫಿ ಬೆಳೆ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳಲಾ ರಂಭಿಸಿದೆ. ದೇಶದಲ್ಲಿ 140 ಕೋಟಿಗೂ ಅಧಿಕ ಜನಸಂಖ್ಯೆ ಇದ್ದರೂ ದೇಶದಲ್ಲಿ ಉತ್ಪಾದನೆಯಾಗುವ 4 ಲಕ್ಷ ಟನ್ ಕಾಫಿಯನ್ನು ಮಾರಾಟ ಮಾಡಬೇಕಾದರೆ ಯುರೋಪ್ ದೇಶಗಳನ್ನು ಆಶ್ರಯಿಸಬೇಕಾದ ಪರಿಸ್ಥಿತಿ ಇಂದಿಗೂ ನಿರ್ಮಾಣವಾಗಿದೆ. ಭಾರತೀಯರಲ್ಲಿ ಇನ್ನೂ ಹೆಚ್ಚಿನ ಪ್ರಮಾಣದ ಜನರು ಕಾಫಿಯನ್ನು ತನ್ನ ಪ್ರಿಯ ಪಾನಿಯವಾಗಿ ಒಪ್ಪಿಕೊಳ್ಳುವಲ್ಲಿ ಅಷ್ಟರ ಮಟ್ಟಿಗೆ ವಿಶ್ವಾಸ ತೋರದೆ ಇರುವುದು ಇದಕ್ಕೆ ಕಾರಣವಾಗಿದೆ.

» ನಾಲ್ಕನೇ ಪುಟದಲ್ಲಿ

> ನಮ್ಮ ದೇಶದಲ್ಲಿ ಉತ್ಪಾದನೆಯಾಗುವ ಕಾಫಿಯನ್ನು ನಮ್ಮ ದೇಶದ ಜನರೇ ಬಳಸುವಂತಾಗಬೇಕೆಂಬ ಉದ್ದೇಶದಿಂದ ಕಾಫಿ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ಹೀಗಾಗಿ ಕಾರ್ಯಕ್ರಮ ದಲ್ಲಿ 5 ಸಾವಿರ ಜನರಿಗೆ ಉಚಿತವಾಗಿ ಕಾಫಿ ನೀಡಲಾಗುವುದು. ಕಾಫಿ ವಿಥ್ ವಾಕ್, ಕಾಫಿ ವಿಥ್ ಆರ್ಮಿ ಎಂಬ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ.
> -ಸುರೇಂದ್ರ, ಪ್ರಧಾನ ಕಾರ್ಯದರ್ಶಿ ಬೆಳೆಗಾರರ ಒಕ್ಕೂಟ

> ದೇಶದಲ್ಲಿ ಹೆಚ್ಚು ಕಾಫಿ ಬೆಳೆಯುವ ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಬೆಳೆಗಾರರು ಒಟ್ಟಾಗಿ ವಿಶ್ವ ಕಾಫಿ ದಿನಾಚರಣೆಯನ್ನು ಆಚರಿಸುತ್ತಿದ್ದೆವು. ಆದರೆ, ಈ ಬಾರಿ ಆಯುಧ ಪೂಜೆ ಬಂದಿರುವುದರಿಂದ ಆಯಾ ಜಿಲ್ಲೆಗಳಲ್ಲಿ ಆಚರಿಸಲಾಗುತ್ತಿದೆ. ಈ ದಿನವನ್ನು ಹಬ್ಬದ ರೀತಿಯಲ್ಲಿ ಆಚರಿಸಲಾಗುತ್ತಿದೆ. ವಾಕ್ ವಿಥ್ ಕಾಫಿ ಎಂಬ ಕಾರ್ಯಕ್ರಮವನ್ನು ಹಮ್ಮಿ ಕೊಂಡಿದ್ದೇವೆ. ಪ್ರಸ್ತುತ ಬೆಳೆಗಾರರು ಸಾಕಷ್ಟು ಸಮಸ್ಯೆ ಅನುಭವಿಸುತ್ತಿದ್ದು ಆ ಬಗ್ಗೆಯೂ ಬೆಳಕು ಚೆಲ್ಲುವ ಜೊತೆಗೆ ಭಾರತೀಯ ಕಾಫಿಯನ್ನು ಉತ್ತೇಜಿಸುವುದು ನಮ್ಮ ಮೂಲ ಉದ್ದೇಶವಾಗಿದೆ.
> -ಹಳಸೆ ಶಿವಣ್ಣ, ಅಧ್ಯಕ್ಷ ಕರ್ನಾಟಕ ಬೆಳೆಗಾರರ ಒಕ್ಕೂಟ



# ನಾಡಹಬ್ಬ ದಸರಾ ಎಲ್ಲ ಭಾರತೀಯರಿಗೆ ಒಂದೇಯಾದರೂ ಆಚರಣೆಗಳಲ್ಲಿ ಮಾತ್ರ ನಾನಾ ವಿಧ!



## ನಾಡಹಬ್ಬ ದಸರಾ: ದಸರಾವನ್ನು ಏಕೆ ಆಚರಿಸಲಾಗುತ್ತದೆ? ರಾವಣ ದಹನಕ್ಕೆ ಶುಭ ಸಮಯವನ್ನು ತಿಳಿಯಿರಿ

ಭಾರತೀಯ ಸಂಸ್ಕೃತಿಯಲ್ಲಿ, ಹಬ್ಬಗಳು ಸದಾಚಾರ ಮತ್ತು ನ್ಯಾಯದ ಶಾಶ್ವತ ಸಂಪ್ರದಾಯವನ್ನು ಜೀವಂತವಾಗಿಡುವ ಒಂದು ಸಾಧನವಾಗಿದೆ. ನವರಾತ್ರಿಯ ಸಮಯದಲ್ಲಿ ಒಂಬತ್ತು ದಿನಗಳ ಕಾಲ ದುರ್ಗಾ ದೇವಿಯನ್ನು ಪೂಜಿಸಿದ ನಂತರ, ಹತ್ತನೇ ದಿನದಂದು ವಿಜಯದಶಮಿ ಬಂದಾಗ, ಇಡೀ ದೇಶವು ಸುಳ್ಳಿನ ಮೇಲೆ ಸತ್ಯದ ಮತ್ತು ಅಧರ್ಮದ ಮೇಲೆ ಸದಾಚಾರದ ವಿಜಯವನ್ನು ಆಚರಿಸುತ್ತದೆ. ಈ ಹಬ್ಬವನ್ನು ದಸರಾ ಎಂದು ಕರೆಯಲಾಗುತ್ತದೆ.

ವಿಜಯದಶಮಿ (ವಿಜಯದಶಮಿ) ಅಥವಾ ದಸರಾ (ದಸರಾ) ಎಂದರೆ ಕೆಡುಕಿನ ಮೇಲೆ ಒಳ್ಳೆಯದರ ವಿಜಯವನ್ನು ಆಚರಿಸುವ ಒಂದು ಪ್ರಮುಖ ಹಿಂದೂ ಹಬ್ಬವಾಗಿದೆ. ಈ ಹಬ್ಬವು ಒಂಬತ್ತು ದಿನಗಳ ನವರಾತ್ರಿಯ ಕೊನೆಯ ದಿನದಂದು ಬರುತ್ತದೆ ಮತ್ತು ಹಿಂದೂ ಕ್ಯಾಲೆಂಡರ್‌ನ ಶರತ್ಕಾಲದ ಶರನ್ನವರಾತ್ರಿಗಳ ನಂತರದ ವಿಜಯೋತ್ಸವದ ದಿನವಾಗಿದೆ. ಈ ಹಬ್ಬವು ದುರ್ಗಾದೇವಿಯು ಮಹಿಷಾಸುರನನ್ನು ಸಂಹರಿಸಿದ ಮತ್ತು ಶ್ರೀರಾಮನು ರಾವಣನನ್ನು ಸಂಹರಿಸಿದ ದಸರಾದ ವಿಜಯಗಳನ್ನು ಸ್ಮರಿಸುತ್ತದೆ.

**ಪುರಾಣದ ಪ್ರಕಾರ:** ವಿಜಯದಶಮಿ ಎಂದರೆ ವಿಜಯದ ಹತ್ತನೇ ದಿನ ಎಂದರ್ಥ. ದುರ್ಗಾಮಾತೆಯು ರಾಕ್ಷಸ ಮಹಿಷಾಸುರನನ್ನು ಸಂಹರಿಸಿ ಲೋಕವನ್ನು ಕಾಪಾಡಿದ ದಿನವನ್ನು ಇದು ಸ್ಮರಿಸುತ್ತದೆ.

**ದಸರಾ ಮತ್ತು ವಿಜಯದಶಮಿ:** ದಸರಾ ಮತ್ತು ವಿಜಯದಶಮಿ ಒಂದೇ ದಿನದಂದು ಬರುತ್ತವೆ, ಆದರೆ ವಿಭಿನ್ನ ಪುರಾಣಗಳನ್ನು ಸೂಚಿಸುತ್ತವೆ.

**ದಸರಾ:** ಶ್ರೀರಾಮನು ರಾವಣನ ಮೇಲೆ ಸಾಧಿಸಿದ ವಿಜಯವನ್ನು ಸೂಚಿಸುತ್ತದೆ.

**ವಿಜಯದಶಮಿ:** ದುರ್ಗಾದೇವಿಯು ಮಹಿಷಾಸುರನನ್ನು ಸೋಲಿಸಿದ ವಿಜಯವನ್ನು ಆಚರಿಸುತ್ತದೆ.

**ದಸರಾ ಆಚರಣೆ:** ಭಾರತದಾದ್ಯಂತ ನವರಾತ್ರಿ ಉತ್ಸವದ ಕೊನೆಯಲ್ಲಿ ಅದ್ದೂರಿಯಾಗಿ ಆಚರಿಸುವ ಹಬ್ಬವಾಗಿದೆ.

### ಉತ್ತಮ ಆಚರಣೆಗಳು

**ಒಳ್ಳೆಯದರ ವಿಜಯ:** ಕೆಟ್ಟದ್ದರ ಮೇಲೆ ಒಳ್ಳೆಯದರ ವಿಜಯವನ್ನು ಸೂಚಿಸುತ್ತದೆ.

**ಮೈಸೂರು ದಸರಾ:** ಕರ್ನಾಟಕದಲ್ಲಿ ಪ್ರಮುಖವಾಗಿ ಮೈಸೂರಿನಲ್ಲಿ ಈ ಹಬ್ಬವನ್ನು 10 ದಿನಗಳ ಕಾಲ ಅ ದ್ದೂರಿಯಾಗಿ ಆಚರಿಸಲಾಗುತ್ತದೆ.

**ರಾವಣ ದಹನ:** ರಾಮಲೀಲಾ ಪ್ರದರ್ಶನಗಳ ನಂತರ ದುಷ್ಟ ರಾಕ್ಷಸರ ಪ್ರತಿಕೃತಿಗಳನ್ನು ಬೆಂಕಿಯಲ್ಲಿ ಸುಡಲಾಗುತ್ತದೆ.

**ದಾನ ಮತ್ತು ಶುಭಾಶಯಗಳು:** ದಾನ-ಧರ್ಮ ಮತ್ತು ಶುಭಾಶಯಗಳ ವಿನಿಮಯದೊಂದಿಗೆ ಈ ಹಬ್ಬವನ್ನು ಆಚರಿಸಲಾಗುತ್ತದೆ.

### ದಸರಾ 2025 ದಿನಾಂಕ ಮತ್ತು ರಾವಣ ದಹನಕ್ಕೆ ಶುಭ ಸಮಯ

2025 ರಲ್ಲಿ, ಶರದಿಯಾ ನವರಾತ್ರಿ ಅಕ್ಟೋಬರ್ 1, 2025 ರಂದು ಕೊನೆಗೊಳ್ಳುತ್ತದೆ. ಅದರಂತೆ, ದಸರಾವನ್ನು ಅಕ್ಟೋಬರ್ 2, 2025 ರಂದು ಆಚರಿಸಲಾಗುತ್ತದೆ. ವೈದಿಕ ಕ್ಯಾಲೆಂಡರ್ ಪ್ರಕಾರ, ದಶಮಿ ತಿಥಿ ಅಕ್ಟೋಬರ್ 1 ರಂದು ಸಂಜೆ 7:01 ಕ್ಕೆ ಪ್ರಾರಂಭವಾಗಿ ಅಕ್ಟೋಬರ್ 2 ರಂದು ಸಂಜೆ 7:10 ಕ್ಕೆ ಕೊನೆಗೊಳ್ಳುತ್ತದೆ. ಉದಯತಿಥಿ (ಉದಯ ದಿನಾಂಕ) ಸನಾತನ ಸಂಪ್ರದಾಯದಲ್ಲಿ ಮಹತ್ವದ್ದಾಗಿದೆ, ಆದ್ದರಿಂದ ದಸರಾವನ್ನು ಅಕ್ಟೋಬರ್ 2 ರಂದು ಆಚರಿಸಲಾಗುತ್ತದೆ.

ಜ್ಯೋತಿಷಿಗಳ ಪ್ರಕಾರ, ರಾವಣನ ಪ್ರತಿಕೃತಿಯನ್ನು ಸುಡುವುದನ್ನು ಪ್ರದೋಷ ಅವಧಿಯಲ್ಲಿ ನಡೆಸಲಾಗುತ್ತದೆ. ಪ್ರದೋಷ ಅವಧಿ ಸೂರ್ಯಾಸ್ತದ ನಂತರ ಪ್ರಾರಂಭವಾಗುತ್ತದೆ ಮತ್ತು ರಾತ್ರಿ ಬೀಳುವ ಮೊದಲು ಕೊನೆಗೊಳ್ಳುತ್ತದೆ. ಅದರಂತೆ, ಸಂಜೆ 6:05 ರ ನಂತರ ರಾವಣನನ್ನು ಸುಡುವುದು ಸೂಕ್ತ.

### ಶ್ರೀರಾಮನ ವಿಜಯದ ಸಂಕೇತ

ತ್ರೇತಾಯುಗದಲ್ಲಿ, ರಾಕ್ಷಸ ರಾಜ ರಾವಣನು ತನ್ನ ಶಕ್ತಿ ಮತ್ತು ದುರಹಂಕಾರದಿಂದ ಮೂರು ಲೋಕಗಳನ್ನು ಭಯಭೀತಗೊಳಿಸಿದಾಗ, ವಿಷ್ಣುವು ಅತ್ಯುನ್ನತ ಸದ್ಗುಣದ ಸಾಕಾರವಾದ ಶ್ರೀರಾಮನಾಗಿ ಅವತರಿಸಿದನು. ಲಂಕಾ ಯುದ್ಧದಲ್ಲಿ, ಶ್ರೀರಾಮನು ರಾವಣ, ಅವನ ಸಹೋದರ ಕುಂಭಕರ್ಣ ಮತ್ತು ಮಗ ಮೇಘನಾದನನ್ನು ಕೊಂದು ಧರ್ಮವನ್ನು ಸ್ಥಾಪಿಸಿದನು. ಅಂದಿನಿಂದ, ಪ್ರತಿ ವರ್ಷ ದಸರಾದಂದು ಈ ರಾಕ್ಷಸರ ಪ್ರತಿಕೃತಿಗಳನ್ನು ಸುಡಲಾಗುತ್ತದೆ.

ದಸರಾದಂದು ದೇಶಾದ್ಯಂತ ದೊಡ್ಡ ಜಾತ್ರೆಗಳು, ರಾಮಲೀಲಾಗಳು ಮತ್ತು ರಾವಣ ದಹನವನ್ನು ಆಯೋಜಿಸಲಾಗುತ್ತದೆ. ದುರಹಂಕಾರ, ಅನ್ಯಾಯ ಮತ್ತು ಅಧ ಡಿತವಾಗಿಯೂ ಕೊನೆಗೊಳ್ಳುತ್ತದೆ ಎಂದು ಪೀಳಿಗೆಯಿಂದ ಪೀಳಿಗೆಗೆ ತಿಳಿಸುವ ಒಂದು ಮಾರ್ಗ ಇದು.

### ದಸರಾ 2025

### ವಿಜಯದಶಮಿಯಂದು ಆಯುಧ ಪೂಜೆಯ ಮಹತ್ವ

ಭಾರತೀಯ ಸಂಪ್ರದಾಯದಲ್ಲಿ, ದಸರಾ ಶೌರ್ಯ ಮತ್ತು ಶೌರ್ಯದ ಸಂಕೇತವಾಗಿದೆ. ಈ ದಿನದಂದು ಆಯುಧಗಳನ್ನು ಪೂಜಿಸುವ ಪ್ರಾಚೀನ ಸಂಪ್ರದಾಯವಿದೆ. ಶೌರ್ಯ ಮತ್ತು ಧರ್ಮದ ರಕ್ಷಣೆಗಾಗಿ ಆಯುಧಗಳನ್ನು ಯಾವಾಗಲೂ ಪವಿತ್ರವೆಂದು ಪರಿಗಣಿಸಲಾಗಿದೆ. ಭಾರತೀಯ ಸೇನೆಯು ಈ ದಿನದಂದು ತನ್ನ ಎಲ್ಲಾ ಆಯುಧಗಳನ್ನು ಪೂಜಿಸುತ್ತದೆ. ಸಾಮಾನ್ಯ ಜನರು ತಮ್ಮ ಕೆಲಸದ ಉಪಕರಣಗಳು, ವಾಹನಗಳು ಮತ್ತು ಆಯುಧಗಳನ್ನು ಸಹ ಪೂಜಿಸುತ್ತಾರೆ ಮತ್ತು ಯಶಸ್ಸು ಮತ್ತು ರಕ್ಷಣೆಗಾಗಿ ದೇವರ ಆಶೀರ್ವಾದವನ್ನು ಪಡೆಯುತ್ತಾರೆ.

### ಮಹಿಷಾಸುರ ಮರ್ದಿನಿಯ ವಿಜಯ

ವಿಜಯದಶಮಿಯ ಮಹತ್ವವು ಭಗವಾನ್ ಶ್ರೀ ರಾಮನ ವಿಜಯಕ್ಕೆ ಸೀಮಿತವಾಗಿಲ್ಲ. ಈ ದಿನದಂದು ದುರ್ಗಾ ದೇವಿಯು ಮಹಿಷಾಸುರನನ್ನು ಕೊಂದು, ದೇವತೆಗಳನ್ನು ಅವನ ದಬ್ಬಾಳಿಕೆಯಿಂದ ಮುಕ್ತಗೊಳಿಸಿದಳು. ತಾಯಿ ದುರ್ಗಾ ಒಂಬತ್ತು ದಿನಗಳ ಕಾಲ ಹೋರಾಡಿ ಹತ್ತನೇ ದಿನದಂದು ಮಹಿಷಾಸುರನನ್ನು ಕೊನೆಗೊಳಿಸಿದಳು. ಆದ್ದರಿಂದ, ತಾಯಿಯನ್ನು ''ಮಹಿಷಾಸುರ ಮರ್ದಿನಿ'' ಎಂದೂ ಕರೆಯಲಾಗುತ್ತದೆ. ಅಂದಿನಿಂದ, ನವರಾತ್ರಿಯ ಹತ್ತನೇ ದಿನದಂದು ವಿಜಯದಶಮಿ ಹಬ್ಬವನ್ನು ಆಚರಿಸಲಾಗುತ್ತದೆ.



### ಅಪರಾಜಿತ ದೇವಿಯ ಆರಾಧನೆ

ಧರ್ಮಗ್ರಂಥಗಳ ಪ್ರಕಾರ, ರಾವಣನೊಂದಿಗೆ ಯುದ್ಧ ಮಾಡುವ ಮೊದಲು, ಭಗವಾನ್ ಶ್ರೀ ರಾಮನು ವಿಜಯದಶಮಿಯಂದು ಅಪರಾಜಿತ ದೇವಿಯನ್ನು ಪೂಜಿಸಿದನು. ದೇವಿಯು ಅವನಿಗೆ ವಿಜಯವನ್ನು ಆಶೀರ್ವದಿಸಿದಳು ಮತ್ತು ರಾಮನು ಲಂಕಾವನ್ನು ವಶಪಡಿಸಿಕೊಂಡನು. ಅಂದಿನಿಂದ, ವಿಜಯದಶಮಿಯಂದು ಅಪರಾಜಿತ ದೇವಿಯನ್ನು ಪೂಜಿಸುವ ಸಂಪ್ರದಾಯವಿದೆ.

### ಅಪರಾಜಿತ ದೇವಿಯನ್ನು ಪೂಜಿಸುವ ವಿಧಾನ:

**ಬೆಳಿಗ್ಗೆ ಸ್ನಾನ ಮಾಡಿ ಶುದ್ಧ ಬಟ್ಟೆಗಳನ್ನು ಧರಿಸಿ.**
**ಮಧ್ಯಾಹ್ನ ವಿಜಯ ಮುಹೂರ್ತದಲ್ಲಿ ಅಪರಾಜಿತ ದೇವಿಯನ್ನು ಪೂಜಿಸಿ.**
**ದೇವತೆಗೆ ಸಿಂಧೂರ, ಚುನ್ರಿ, ಮೇಕಪ್ ವಸ್ತುಗಳು, ಹೂವುಗಳು, ಮುರಿಯದ ಅಕ್ಕಿ ಧಾನ್ಯಗಳು, ಧೂಪದ್ರವ್ಯ ಮತ್ತು ನೈವೇದ್ಯವನ್ನು ಅರ್ಪಿಸಿ.**
**ದೇವಿಯ ಮಂತ್ರಗಳನ್ನು ಪಠಿಸಿ ಆರತಿ ಮಾಡಿ.**
**ಕೊನೆಯದಾಗಿ, ತುಪ್ಪದ ದೀಪ ಹಚ್ಚಿ ವಿಜಯಕ್ಕಾಗಿ ಆಶೀರ್ವಾದ ಪಡೆಯಿರಿ.**

### ಶಮಿ ಮತ್ತು ಅಪರಾಜಿತಾ ಸಸ್ಯಗಳ ಪೂಜೆ

ವಿಜಯದಶಮಿಯಂದು ಶಮಿ ಮತ್ತು ಅಪರಾಜಿತಾ ಸಸ್ಯಗಳನ್ನು ಪೂಜಿಸುವುದು ವಿಶೇಷ ಮಹತ್ವವನ್ನು ಹೊಂದಿದೆ. ಈ ಸಸ್ಯಗಳನ್ನು ಪೂಜಿಸುವುದರಿಂದ ರಾಮ ಮತ್ತು ಲಕ್ಷ್ಮಿ ದೇವಿಯ ಆಶೀರ್ವಾದ ಸಿಗುತ್ತದೆ



ಎಂದು ನಂಬಲಾಗಿದೆ. ಮನೆಯಲ್ಲಿ ಸಂತೋಷ ಮತ್ತು ಸಮೃದ್ಧಿ ನೆಲೆಸುತ್ತದೆ ಮತ್ತು ಕುಟುಂಬಕ್ಕೆ ಯಾವುದೇ ತೊಂದರೆ ಸಂಭವಿಸುವುದಿಲ್ಲ.

ಶಮಿ ಮರವನ್ನು ಯುದ್ಧ ಮತ್ತು ವಿಜಯದ ಸಂಕೇತವೆಂದು ಪರಿಗಣಿಸಲಾಗುತ್ತದೆ. ಮಹಾಭಾರತದ ಸಮಯದಲ್ಲಿ, ಪಾಂಡವರು ತಮ್ಮ ಆಯುಧಗಳನ್ನು ಶಮಿ ಮರದಲ್ಲಿ ಮರೆಮಾಡಿದರು, ಮತ್ತು ವಿಜಯದಶಮಿಯಂದು, ಅರ್ಜುನನು ಅವುಗಳನ್ನು ಮರಳಿ ಪಡೆದು ಕುರು ಸೈನ್ಯದ ವಿರುದ್ಧದ ಮಹಾ ಯುದ್ಧವನ್ನು ಗೆದ್ದನು.

ದಸರಾ ಜೀವನದ ಸತ್ಯ. ಪ್ರತಿಯೊಬ್ಬ ವ್ಯಕ್ತಿಯೊಳಗೆ ಅಹಂಕಾರ, ಕೋಪ, ದುರಾಸೆ ಮತ್ತು ಬಯಕೆಯ ರೂಪದಲ್ಲಿ ರಾವಣ ಇರುತ್ತಾನೆ ಎಂದು ಅದು ನಮಗೆ ಕಲಿಸುತ್ತದೆ. ಈ ದುಷ್ಟ ಪ್ರವೃತ್ತಿಗಳನ್ನು ನಾವು ಸುಟ್ಟುಹಾಕಿದಾಗ ಮಾತ್ರ ನಾವು ನಿಜವಾದ ವಿಜಯವನ್ನು ಸಾಧಿಸಬಹುದು.

ರಾಮನು ರಾವಣನನ್ನು ಗೆದ್ದಂತೆ, ನಾವು ನಮ್ಮೊಳಗಿನ ದುಷ್ಟತನವನ್ನು ಜಯಿಸಬೇಕು. ಇದು ದಸರಾದ ನಿಜವಾದ ಸಂದೇಶ. ಧರ್ಮವನ್ನು ಅನುಸರಿಸಿ, ಸತ್ಯದ ಪರವಾಗಿ ನಿಂತು, ಜೀವನದಲ್ಲಿ ಯಾವಾಗಲೂ ವಿಜಯವನ್ನು ಸಾಧಿಸಿ.

### ದಸರಾ ಮತ್ತು ವಿಜಯದಶಮಿ ಒಂದೇನಾ? ಯಾರಿಗೂ ತಿಳಿಯದ 3 ರಹಸ್ಯಗಳಿವು!

ವಿಜಯದಶಮಿ ಮತ್ತು ದಸರಾ ಒಂದೇನಾ? ಪೌರಾಣಿಕ ಅರ್ಥದಲ್ಲಿ 3 ಪ್ರಮುಖ ವ್ಯತ್ಯಾಸಗಳು. ದಸರಾ ಮತ್ತು ವಿಜಯದಶಮಿ ಬಗ್ಗೆ ಬಹುತೇಕರಿಗೆ ಗೊತ್ತಿಲ್ಲದ ದೊಡ್ಡ ರಹಸ್ಯ ಇಲ್ಲಿದೆ. ಹೌದು, ದಸರಾ ( 2025) ಮತ್ತು ವಿಜಯದಶಮಿ ( 2025) ಹಬ್ಬಗಳು ಒಂದೇ ಎಂದು ಅನೇಕರು ಭಾವಿಸುತ್ತಾರೆ. ಆದರೆ, ಪೌರಾಣಿಕ ಹಿನ್ನೆಲೆಯ ಪ್ರಕಾರ, ಈ ಎರಡು ಹಬ್ಬಗಳಿಗೆ ವಿಭಿನ್ನ ಮಹತ್ವಗಳಿವೆ. ಇವುಗಳ ನಡುವಿನ ಮುಖ್ಯ ವ್ಯತ್ಯಾಸಗಳನ್ನು ತಿಳಿಯೋಣ.

ಶಾರದೀಯ ನವರಾತ್ರಿಯ (2025) ದಿನಗಳು ಮುಕ್ತಾಯಗೊಳ್ಳುತ್ತಿದ್ದು, ನಂತರ ದೇಶದಾದ್ಯಂತ ದಸರಾ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಗುತ್ತದೆ. ಈ ಹಬ್ಬವು ದುಷ್ಟತನದ ಮೇಲೆ ಒಳ್ಳೆಯತನದ ವಿಜಯವನ್ನು ಸಂಕೇತಿಸುತ್ತದೆ. ಸಾಮಾನ್ಯವಾಗಿ ಜನರು ವಿಜಯದಶಮಿ ಮತ್ತು ದಸರಾ ಒಂದೇ ಎಂದು ಭಾವಿಸಿದರೂ, ಅವೆರಡರ ನಡುವೆ ಮಹತ್ವದ ವ್ಯತ್ಯಾಸವಿದೆ.

ದಸರಾ ಮತ್ತು ವಿಜಯದಶಮಿ ಎರಡೂ ಆಶ್ವಯುಜ ಮಾಸದ ಹತ್ತನೇ ದಿನದಂದು ಆಚರಿಸಲಾಗುವ ಹಬ್ಬಗಳಾಗಿವೆ. ಆದರೆ, ಅವುಗಳ ಹಿಂದಿನ ಪೌರಾಣಿಕ ಕಥೆಗಳು ಭಿನ್ನವಾಗಿವೆ. ದಸರಾ ಮತ್ತು ವಿಜಯದಶಮಿ ಒಂದೇ ದಿನದಂದು ಆಚರಿಸಲಾಗುತ್ತದೆ. ದಸರಾ ಹಬ್ಬವು ಶ್ರೀರಾಮನು ರಾವಣನ ಮೇಲೆ ಸಾಧಿಸಿದ ವಿಜಯಕ್ಕೆ ಸಂಬಂಧಿಸಿದೆ. ವಿಜಯದಶಮಿ ಹಬ್ಬವು ದುರ್ಗಾ ದೇವಿಯು ಮಹಿಷಾಸುರನನ್ನು ಸಂಹರಿಸಿದ ವಿಜಯದ ಸಂಕೇತವಾಗಿದೆ.

ದಸರಾ ದಿನದಂದು ಶ್ರೀರಾಮನು ರಾವಣನನ್ನು ಸಂಹರಿಸಿದರೆ, ವಿಜಯದಶಮಿ ದಿನದಂದು ದುರ್ಗಾ ದೇವಿಯು ಮಹಿಷಾಸುರನನ್ನು ಸೋಲಿಸಿದಳು. ಹೀಗಾಗಿ, ದಸರಾ ದುಷ್ಟ ಶಕ್ತಿಗಳ ಮೇಲೆ ಧರ್ಮದ ವಿಜಯವನ್ನು ಪ್ರತಿನಿಧಿಸುತ್ತದೆ. ವಿಜಯದಶಮಿ ಎಂದರೆ ವಿಜಯದ ಹತ್ತನೇ ದಿನ ಎಂದರ್ಥ. ಇದು ಮಹಿಷಾಸುರನ ಮೇಲೆ ದುರ್ಗಾ ದೇವಿಯ ವಿಜಯವನ್ನು ಆಚರಿಸುತ್ತದೆ.

### ದಸರಾ ಹಬ್ಬದ ಮಹತ್ವ

ದಸರಾ ಹಬ್ಬವು ಶ್ರೀರಾಮನು ರಾವಣನ ವಧೆ ಮಾಡಿದ ಸಂಕೇತವಾಗಿದೆ. ನವರಾತ್ರಿ ಉತ್ಸವದ ನಂತರ, ಆಶ್ವಯುಜ ಮಾಸದ ಶುಕ್ಲ ಪಕ್ಷದ ಹತ್ತನೇ ದಿನದಂದು ಇದನ್ನು ಆಚರಿಸಲಾಗು ತ್ತದೆ. ಈ ದಿನ ರಾವಣನ ಪ್ರತಿಕೃತಿಗಳನ್ನು ದಹಿಸಿ, ದುಷ್ಟ ಶಕ್ತಿಗಳ ಮೇಲೆ ಒಳ್ಳೆಯತನದ ವಿಜಯವನ್ನು ಸಂಭ್ರಮಿಸಲಾಗುತ್ತದೆ.

ಮಂಗಳ-ಬುಧನಿಂದ ಲಾಭ ಯೋಗ: ದೀಪಾವಳಿಯವರೆಗೆ ಈ 5 ರಾಶಿಗಳಿಗೆ ಧನ ಪ್ರಾಪ್ತಿ! ಜೀವನವೇ ಬದಲಾಗುತ್ತೆ ಮಂಗಳ -ಬುಧನಿಂದ ಲಾಭ ಯೋಗ: ದೀಪಾವಳಿಯ ವರೆಗೆ ಈ 5 ರಾಶಿಗಳಿಗೆ ಧನ ಪ್ರಾಪ್ತಿ! ಜೀವನವೇ ಬದಲಾಗುತ್ತೆ

### ವಿಜಯದಶಮಿಯ ಮಹತ್ವ

ವಿಜಯದಶಮಿಯ ಈ ದಿನ ದುರ್ಗಾ ದೇವಿಯು ಮಹಿಷಾಸುರನನ್ನು ಸಂಹರಿಸಿದಳು. ಇದು ನಕಾರಾತ್ಮಕ ಶಕ್ತಿಗಳ ಮೇಲೆ ವಿಜಯದ ಸಂಕೇತ. ದುರ್ಗಾ ದೇವಿಯು ಒಂಬತ್ತು ದಿನಗಳ ಕಾಲ ಮಹಿಷಾಸುರನೊಂದಿಗೆ ಯುದ್ಧ ಮಾಡಿ, ಹತ್ತನೇ ದಿನ ಅವನನ್ನು ಕೊಂದಳು. ವಿಜಯದಶಮಿ ಅಂದರೆ ವಿಜಯದ ಹತ್ತನೇ ದಿನ. ಇದು ದುರ್ಗಾ ದೇವಿಯ ವಿಜಯವನ್ನು ಸೂಚಿಸುತ್ತದೆ. ಇದನ್ನು ಸಹ ಆಶ್ವಯುಜ ಮಾಸದ ಹತ್ತನೇ ದಿನದಂದು ಆಚರಿಸಲಾಗುತ್ತದೆ.

### ಶಕ್ತಿಯ ಆಚರಣೆ, ವಿಜಯದ ಸಂಕೇತ

ದಸರಾ ಅಥವಾ ವಿಜಯದಶಮಿ ನವರಾತ್ರಿಯ ಹತ್ತನೇ ದಿನದಂದು ಬರುತ್ತದೆ. ಈ ದಿನ ದುರ್ಗಾ ದೇವಿಯ ವಿವಿಧ ರೂಪಗಳನ್ನು ಒಂಬತ್ತು ದಿನಗಳ ಕಾಲ ಪೂಜಿಸಿದ ನಂತರ ಆಚರಿಸಲಾಗುತ್ತದೆ. ಈ ದಿನ ಶಸ್ತ್ರಪೂಜೆಯನ್ನು ಸಹ ಮಾಡಲಾಗುತ್ತದೆ. ಶ್ರೀರಾಮನು ರಾವಣನನ್ನು ಸೋಲಿಸುವ ಮೊದಲು ತನ್ನ ಶಸ್ತ್ರಾಸ್ತ್ರಗಳನ್ನು ಪೂಜಿಸಿದನು. ದುರ್ಗಾ ದೇವಿಯೂ ಮಹಿಷಾಸುರನನ್ನು ವಧಿಸುವ ಮೊದಲು ತನ್ನ ಶಕ್ತಿಗಳನ್ನು ಪೂಜಿಸಿದಳು. ಹೀಗಾಗಿ, ಇದು ದುಷ್ಟ ಶಕ್ತಿಗಳ ಮೇಲೆ ಧರ್ಮದ ವಿಜಯದ ಸಂಕೇತವಾಗಿದ್ದು, ಶಕ್ತಿ ಮತ್ತು ರಕ್ಷಣೆಯ ಆಶೀರ್ವಾದ ಪಡೆಯಲು ಇದನ್ನು ಆಚರಿಸಲಾಗುತ್ತದೆ.

### ರಾವಣ ದಹನದ ಸಮಯ

**ದಶಮಿ ತಿಥಿ:** ಅಕ್ಟೋಬರ್ 1 ರಂದು ಸಂಜೆ 7:01ಕ್ಕೆ ಪ್ರಾರಂಭ.

**ಮುಕ್ತಾಯ:** ಅಕ್ಟೋಬರ್ 2 ರಂದು ಸಂಜೆ 7:10 ರವರೆಗೆ ಇರುತ್ತದೆ.

**ಸೂರ್ಯಾಸ್ತದ ಸಮಯ:** ಸಂಜೆ 6:06

**ರಾವಣ ದಹನ:** ಸೂರ್ಯಾಸ್ತದ ನಂತರ ಪ್ರಾರಂಭವಾಗುವ ಪ್ರದೋಷ ಕಾಲದಲ್ಲಿ ನಡೆಯಲಿದೆ.

### ದಸರಾ ದಿನದ ಪ್ರಮುಖ ಆಚರಣೆಗಳು

★ **ಆಯುಧ ಪೂಜೆ**
★ **ಶಮೀ ಪೂಜೆ ಅಥವಾ ಬನ್ನಿ ಮರದ ಪೂಜೆ**
★ **ಹೊಸ ಕಾರ್ಯಗಳ ಆರಂಭ**

ದಸರಾ ಹಬ್ಬವನ್ನು ದೇಶದಾದ್ಯಂತ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಅದರಲ್ಲೂ ಕರ್ನಾಟಕದಲ್ಲಿ ಇದರ ಆಚರಣೆ ವೈಭವದಿಂದ ಕೂಡಿರುತ್ತದೆ. ಕೆಡುಕಿನ ಮೇಲೆ ಒಳ್ಳೆಯದರ ವಿಜಯದ ಸಂಕೇತವಾಗಿ ದಸರಾ ಹಬ್ಬವನ್ನು ಆಚರಿಸಲಾಗುತ್ತದೆ.

### ಒಂದೇಯಾದರೂ ಆಚರಣೆಗಳಲ್ಲಿ ಮಾತ್ರ ನಾನಾ ವಿಧ!

- ದೇಶದಾದ್ಯಂತ ಹಿಂದೂಗಳು ಆಚರಿಸುವ ಪ್ರಮುಖ ಮತ್ತು ದೊಡ್ಡ ಹಬ್ಬಗಳಲ್ಲಿ ದಸರಾ ಸಹ ಒಂದಾಗಿದ್ದು ವಿಜಯದಶಮಿ ಅಂತಲೂ ಕರೆಯುವ ಈ ಹಬ್ಬವನ್ನು ಅತ್ಯಂತ ಸಡಗರ ಮತ್ತು ಸಂಭ್ರಮದಿಂದ ಆಚರಿಸಲಾಗುತ್ತದೆ. ಕೋವಿಡ್-19 ಕಳೆದೆರಡು ವರ್ಷಗಳಿಂದ ಎಲ್ಲ ಹಬ್ಬಗಳ ಮೇಲೆ ತನ್ನ ಕರಾಳ ಛಾಯೆ ಬೀರಿದೆಯಾದರೂ ಜನರಲ್ಲಿ ಉತ್ಸಾಹ ಮಾತ್ರ ತಗ್ಗಿಲ್ಲ. ಹಿಂದೂ ಧರ್ಮಶಾಸ್ತ್ರದ ಪ್ರಕಾರ 9 ದಿನಗಳ ನವರಾತ್ರಿ ಉತ್ಸವ ದಸರಾದೊಂದಿಗೆ ಕೊನೆಗೊಳ್ಳುತ್ತದೆ. ಇದೇ ದಿನದಂದು ರಾಮ ರಾವಣನನ್ನು ಕೊಂದಿದ್ದು. ಹಾಗೆಯೇ ದಸರಾದಂದೇ, ದುರ್ಗಾ ಮಾತೆಯು ಅಸುರರ ಅರಸ ಮಹಿಷಾಸುರನ ವಧೆ ಮಾಡಿದಳೆಂದು ಧರ್ಮಶಾಸ್ತ್ರದಲ್ಲಿ ಉಲ್ಲೇಖಿಲಾಗಿದೆ. ಹಾಗಾಗೇ, ಈ ಹಬ್ಬ ಕೆಟ್ಟತನದ ವಿರುದ್ಧ ಒಳ್ಳೆಯತನ ಗೆಲುವು ಸಾಧಿಸಿದ ದಿನವೆಂದು ಪರಿಗಣಿಸಲಾಗುತ್ತದೆ.
- ನಮ್ಮ ರಾಜ್ಯದಲ್ಲಿ ಇದು ನಾಡಹಬ್ಬ, ಮೈಸೂರು ದಸರಾ ಮಹೋತ್ಸವ ವಿಶ್ವಪ್ರಸಿದ್ಧ. ಸುಮಾರು 10 ದಿನಗಳವರೆಗೆ ಕರ್ನಾಟಕದ ಸಾಂಸ್ಕೃತಿಕ ನಗರಿ ಮೈಸೂರು ಮದುವಣಗಿತ್ತಿಯಂತೆ ಕಂಗೊಳಿಸುತ್ತದೆ. ಜಂಬೂ ಸವಾರಿ ಮೈಸೂರು ದಸರಾ ಉತ್ಸವದ ಪ್ರಮುಖ ಆಕರ್ಷಣೆ.
- ಮಂಗಳೂರು ಮತ್ತು ಮಡಿಕೇರಿಯಲ್ಲಿ ದಾಸರಾ ಹಬ್ಬವನ್ನು ಭಿನ್ನವಾಗಿ ಆಚರಿಸಲಾಗುತ್ತದೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಹಬ್ಬವನ್ನು ಬಹು ವಿಜೃಂಭಣೆಯಿಂದ ಆಚರಿಸಲಾಗುತ್ತದೆ.
- ಉತ್ತರ ಭಾರತದ ರಾಜ್ಯಗಳಲ್ಲಿ ಜನ ದಸರೆಯಂದು ರಾಮಲೀಲಾ ಆಯೋಜಿಸಿ ರಾವಣನ ಪ್ರತಿಕೃತಿಗಳ ದಹನ ಮಾಡುತ್ತಾರೆ. ಪಶ್ಚಿಮ ಬಂಗಾಳದಲ್ಲಿ 9 ದಿನಗಳ ಕಾಲ ದುರ್ಗಾಮಾತೆ ಪೂಜೆ ಸಲ್ಲಿಸಿದ ನಂತರ ದೇವಿಯ ವಿಗ್ರಹಗಳನ್ನು ನೀರಿನಲ್ಲಿ ವಿಸರ್ಜಿಸಲಾಗುತ್ತದೆ.
- ಹಿಮಾಚಲ ಪ್ರದೇಶದಲ್ಲಿ ವಿಜಯದಶಮಿಯನ್ನು ಕುಲು ಹೆಸರಿನಲ್ಲಿ ಆಚರಿಸಲಾಗುತ್ತದೆ. ಈ ರಾಜ್ಯದ ಜನ ದಸರಾ ಮುನ್ನಿನ ಉತ್ಸವಗಳನ್ನು 9 ದಿನಗಳ ಬದಲು ಕೇವಲ 7 ದಿನ ಮಾತ್ರ ಆಚರಿಸುತ್ತಾರೆ.
- ರಾಜಸ್ತಾನಿಗಳಿಗೆ ದಸರೆಯೆಂದರೆ ಕೋಟಾ ಹಬ್ಬ, ಹಬ್ಬದ ಸಂದರ್ಭದಲ್ಲಿ ಭಜನೆ ಮತ್ತು ಕೀರ್ತನೆಗಳನ್ನು ಹಾಡಲಾಗುತ್ತದೆ.



**ಚನ್ನರಾಯಪಟ್ಟಣ: ಚನ್ನರಾಯಪಟ್ಟಣ ತಾಲ್ಲೂಕು ಕಾಮನಹಳ್ಳಿ ಗ್ರಾಮದೇವತೆ ಶ್ರೀ ಲಕ್ಷ್ಮೀದೇವಿ ಅಮ್ಮನವರಿಗೆ ನವರಾತ್ರಿ ಪ್ರಯುಕ್ತ ಸೋಮವಾರ ವಿಳ್ಯದೆಲೆ ಹಾಗೂ ಅಡಿಕೆ ಕಾಯಿ ಅಲಂಕಾರ ಮಾಡಲಾಗಿದ್ದು ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಭಕ್ತರು ಹಣ್ಣು ಕಾಯಿ ಅರ್ಪಿಸಿ ದೇವಿಯ ದರ್ಶನ ಪಡೆದರು.**

## ನಾಳೆ ಪ್ರಾಣಿವಧೆ ಮಾಂಸ ಮಾರಾಟ ನಿಷೇಧ

• ಪ್ರಜೋದಯ ವರದಿ



**ಹಾಸನ:** ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಕಸಾಯಿ ಖಾನೆಗಳಲ್ಲಿ ಅ.2 ರಂದು ಎಲ್ಲಾ ರೀತಿಯ ಪ್ರಾಣಿವಧೆ ಮತ್ತು ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ.

ಆದಾಗ್ಯೂ ಪ್ರಾಣಿವಧೆ ಹಾಗೂ ಮಾಂಸ ಮಾರಾಟ ಮಾಡುವುದು ಕಂಡು ಬಂದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮಹಾನಗರ ಪಾಲಿಕೆಯ ಆಯುಕ್ತ ಕೃಷ್ಣಮೂರ್ತಿ ತಿಳಿಸಿದ್ದಾರೆ.

## ಕತ್ತರಿಘಟ್ಟದಲ್ಲಿ ದುರ್ಗಾಷ್ಟಮಿ ಹೋಮ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ದೇಶದಲ್ಲಿ ಆಚರಿಸಲಾಗುವ ನವರಾತ್ರಿ ಆಚರಣೆಯಲ್ಲಿ ದೇವಿಯನ್ನು ವಿಶೇಷವಾಗಿ ಪೂಜಿಸುವ ಕೆಲಸ ಎಲ್ಲೆಡೆ ನಡೆಯುತ್ತಿದ್ದು, ತಾಲ್ಲೂಕಿನ ಕತ್ತರಿಘಟ್ಟದ ಮೆಳಿಯಮ್ಮ ಆಧ್ಯಾತ್ಮಿಕ ಕೇಂದ್ರದಲ್ಲಿ ಮಂಗಳವಾರದಂದು ಲೋಕ ಕಲ್ಯಾಣಾರ್ಥವಾಗಿ ನಾಡಿನ ಜನರ ಸುಭಿಕ್ಷತೆಗಾಗಿ ಚಂಡಿಕಾ ಹೋಮ ನಡೆಸಿ, ಮುತ್ತೈದೆಯರಿಗೆ ಬಾಗಿಣ ಸಲ್ಲಿಸಲಾಯಿತು.

ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ, ಕತ್ತರಿಘಟ್ಟದಲ್ಲಿ ಶ್ರೀ ಚಂದ್ರಶೇಖರ್ ಗುರೂಜಿಗಳು ಸ್ಥಾಪಿಸಲಾಗಿರುವ ಶ್ರೀ ಮೆಳಿಯಮ್ಮ ಆಧ್ಯಾತ್ಮಿಕ ಕೇಂದ್ರದಲ್ಲಿ ನವರಾತ್ರಿ ದಿನಗಳಲ್ಲಿ, ಆಯುಧಪೂಜೆ ಮತ್ತು ವಿಜಯದಶಮಿಯ ಶುಭ ಮನುಕುಲಕ್ಕೆ ಸಿಗಲಿ, ನಾಡಿನೆಲ್ಲೆಡೆ ಶಾಂತಿ, ಸಂತೋಷ,



ಸುಖ, ಸಂಪತ್ತು ವೃದ್ಧಿಸಲಿ ಎಂಬುದಾಗಿ ಆಧ್ಯಾತ್ಮಿಕ ಕೇಂದ್ರದಲ್ಲಿ ದುರ್ಗಾಷ್ಟಮಿಯ ದಿನವಾದ ಮಂಗಳವಾರದಂದು ಚಂಡಿಕಾ ಹೋಮ ಏರ್ಪಡಿಸಲಾಗಿತ್ತು.

ಬೆಳಿಗ್ಗೆ ಕನ್ಯಾಪೂಜೆ, ಸಂಕಲ್ಪ, ನವದೇವತೆಗಳಿಗೆ 12 ಪರಾಯಣ ಪಠಿಸಿ, ಎಲ್ಲ ದೇವತೆಗಳನ್ನು ಪೂಜಿಸಿ, ಚಂಡಿಕಾ ಹೋಮ ನಡೆಸಿ, ಪೂರ್ಣಾಹುತಿ ಸಲ್ಲಿಸಲಾಗಿದೆ. ಮತ್ತು 25 ಮುತ್ತೈದೆಯರಿಗೆ ಬಾಗಿಣ ಅರ್ಪಿಸಿಸಲಾಯಿತು. ಈ ವರ್ಷವೂ ನಾಡಿನಲ್ಲಿ ಯಾವುದೇ ಅವಘಡ ಆಗದಂತೆ ದೇವರಲ್ಲಿ ಪ್ರಾರ್ಥಿಸಲಾಯಿತು.

ಈ ವೇಳೆ ಜಿ.ಪಂ.ಮಾಜಿ ಸದಸ್ಯೆ ಕುಸುಮಾ ಬಾಲಕೃಷ್ಣ ಸೇರಿ ನಾಡಿನ ತಾಲ್ಲೂಕಿನ ವಿವಿಧ ಗಣ್ಯರು ಹೋಮದಲ್ಲಿ ಭಾಗಿಯಾಗಿದ್ದರು.

## ಆಟೋ ಚಾಲಕ ಗಿರೀಶ್ ವಿಶಿಷ್ಟ ಸಾಧನೆ

• ಪ್ರಜೋದಯ ವರದಿ

**ಹಾಸನ:** ನಗರದ ಆಟೋ ಚಾಲಕ ಗಿರೀಶ್ ಅವರು ತಮ್ಮದೇ ಆದ ವೃತ್ತಿಯಲ್ಲಿ ವಿಶಿಷ್ಟ ಸಾಧನೆ ಮಾಡಿದ್ದಾರೆ.

ಸಾಮಾನ್ಯವಾಗಿ 650 ಕೆ.ಜಿ. ತೂಕ ಸಾಗಿಸುವ ಸಾಮರ್ಥ್ಯವಿರುವ ಗೂಡ್ಸ್ ಎಲೆಕ್ಟ್ರಿಕ್ ಆಪೆ ಆಟೋದಲ್ಲಿ ಅವರು 1785 ಕೆ.ಜಿ. ತೂಕವನ್ನು ಯಶಸ್ವಿಯಾಗಿ ಸಾಗಿಸಿದ್ದಾರೆ. ಈ ಸಾಧನೆಗೆ ವರ್ಷ ಹಾಗು ಸಮಯವೂ ಗಮನಾರ್ಹವಾಗಿದೆ. 9-9-2025ರಂದು ರಾತ್ರಿ 9 ಗಂಟೆ 9 ನಿಮಿಷ 9 ಸೆಕೆಂಡ್‌ಗೆ ಡೇರಿ ವೃತ್ತದಿಂದ ತಣ್ಣೀರುಹಳ್ಳದವರೆಗೆ 1785 ಕೆ.ಜಿ. ತೂಕವನ್ನು ಸುರಕ್ಷಿತವಾಗಿ ಸಾಗಿಸುವಲ್ಲಿ ಗಿರೀಶ್ ಯಶಸ್ವಿಯಾಗಿದ್ದಾರೆ. ಸಂಖ್ಯಾ ಶಾಸ್ತ್ರದ ದೃಷ್ಟಿಯಿಂದಲೂ ಈ ದಿನಾಂಕ, ಸಮಯ ಹಾಗು ವರ್ಷದ ಮೊತ್ತ 9ಕ್ಕೆ ಹೊಂದಿಕೆಯಾಗಿರುವುದು ಕುತೂಹಲ



ಕೆರಳಿಸಿದೆ.

ಈ ಪ್ರಯತ್ನದಲ್ಲಿ ಸಂಚಾರಿ ಪೊಲೀಸ್ ಅಧಿಕಾರಿಗಳ ಸಹಕಾರ, ಜೊತೆಗೆ ಕುಟುಂಬ ಹಾಗೂ ಸ್ನೇಹಿತರ ಪ್ರೋತ್ಸಾಹ ಗಿರೀಶ್ ಅವರ ಹಿಂದೆ ನಿಂತಿತ್ತು. ಗಿರೀಶ್ ಅವರ ಮಾತಿನಲ್ಲಿ, ಇದು ನನ್ನ ಬದುಕಿನಲ್ಲೇ ಒಂದು ಮರೆಯದ ಕ್ಷಣ. ಆಟೋ ಚಲಾವಣೆಯಲ್ಲಿ ಶ್ರಮವಿದ್ದರೂ, ಧೈರ್ಯದಿಂದ ಹಾಗೂ ಎಲ್ಲರ ಸಹಕಾರದಿಂದ ಈ ಸಾಧನೆ ಸಾಧ್ಯವಾಯಿತು ಎಂದರು.

ಇದೇ ರೀತಿಯ ಸಂಖ್ಯಾತ್ಮಕ ಸಂಯೋಗ (9-9-9) ಮತ್ತೆ ಬರಲು 2034ನೇ ಇಸವಿಯವರೆಗೆ ಕಾಯಬೇಕಾ ಗಿದೆ. ಈ ವರ್ಷದ ಗಿರೀಶ್ ಅವರ ಸಾಧನೆ ಅದ್ಭುತವಾಗಿ ಇತಿಹಾಸದಲ್ಲಿ ಉಳಿಯಲಿದೆ.

## ರಾಗಿ ಖರೀದಿ ಹಣ ವಿತರಣೆಗೆ ಆಗ್ರಹ

• ಪ್ರಜೋದಯ ವರದಿ

**ಹೊಳೆನರಸೀಪುರ:** ಖರೀದಿ ಕೇಂದ್ರಕ್ಕೆ ರಾಗಿ ಮಾರಾಟ ಮಾಡಿರುವ ರೈತರ ಖಾತೆಗೆ ಈವರೆಗೂ ಹಣ ಸಂದಾಯವಾಗಿಲ್ಲ. ತಕ್ಷಣವೇ ಹಣ ಹಾಕುವಂತೆ ರೈತರ ಪರ ಒತ್ತಾಯಿಸಿದ ಕರವೇ ಕಾರ್ಯಕರ್ತರು ಬೀದಿಗಿಳಿದು ಹೋರಾಟ ನಡೆಸಿದರು.

ತಾಲ್ಲೂಕಿನ ಹಳ್ಳಿಮೈಸೂರು ಗ್ರಾಮದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ ಕರವೇ ತಾಲ್ಲೂಕು ಅಧ್ಯಕ್ಷ ವಹಿಲೇಶ್ ಮಾತನಾಡಿ, ಹೋಬಳಿಯ ವ್ಯಾಪ್ತಿಯ 600 ರೈತರು ನಿಗದಿಗೊಳಿಸಿದ ಪ್ರಮಾಣದಷ್ಟು ರಾಗಿ ಮಾರಾಟ ಮಾಡಿದ್ದಾರೆ. ಈವರೆಗೆ ಒಟ್ಟು 2,57,40,000 ರೂ. ನಷ್ಟು ಹಣ ರೈತರ ಖಾತೆಗಳಿಗೆ ಸಂದಾಯ ಬಾಕಿ ಇದೆ. ಹಲವು ರೈತರು ತಮ್ಮ ಬೆಳೆಗೆ ಸರ್ಕಾರದಿಂದ ಬೆಂಬಲ ಬೆಲೆ ದೊರಕುತ್ತದೆ ಎಂಬ ಆಶಾಭಾವದಿಂದ



ಮಾರಾಟ ಮಾಡಿದ್ದಾರೆ. ಅವರು ಕಾದು ಕುಳಿತು ನಷ್ಟ ಅನುಭವಿಸುವಂತಾಗಿದೆ. ಸಾಲು ಸಾಲು ಹಬ್ಬಗಳ ವೆಚ್ಚಕ್ಕೆ ರಾಗಿ ಹಣದ ನಿರೀಕ್ಷೆ ಇಟ್ಟುಕೊಂಡಿದ್ದವರಿಗೆ ಅಧಿಕಾರಿಗಳು ನಿರಾಸೆ ಮೂಡಿಸಿದ್ದಾರೆ. ಈ ಬಗ್ಗೆ ಎಚ್ಚೆತ್ತು ತಕ್ಷಣವೇ ರೈತರ ಖಾತೆಗೆ ಹಣ ಜಮಾಗೊಳಿಸಬೇಕು ಎಂದು ಆಗ್ರಹಿಸಿದರು.

ಹಳ್ಳಿಮೈಸೂರು ಹೋಬಳಿ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ್, ಯುವ ಘಟಕದ ಅಧ್ಯಕ್ಷ ನವೀನ್‌ಕುಮಾರ್, ಉಪಾಧ್ಯಕ್ಷ ಸುಮಂತ್, ನಗರ ಘಟಕದ ಕಾರ್ಯದರ್ಶಿ ಸಂತೋಷ್ ಮತ್ತು ದಯಾನಂದ, ಕರವೇ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಭರತ್ ಹಾಗೂ ರೈತರು ಹಾಜರಿದ್ದರು.

ಮುಂದಿನ 15 ದಿನದ ಗಡುವಿನಲ್ಲಿ ಎಲ್ಲ ರೈತರ ಖಾತೆಗೆ ಹಣ ಸಂದಾಯಗೊಳಿಸಲು ಕ್ರಮ ಕೈಗೊಳ್ಳುತ್ತೇವೆ. ಹಲವು ತಾಂತ್ರಿಕ ಕಾರಣಗಳಿಂದ ತಡೆಯಾಗಿತ್ತು. ವಿಳಂಬವಾಗಿದ್ದಕ್ಕೆ ವಿಷಾದ ಇದೆ ಎಂದು ಹಳ್ಳಿಮೈಸೂರು ಹೋಬಳಿಯ ಉಪತಹಸೀಲ್ದಾರ್ ಶಿವಕುಮಾರ್, ಚನ್ನರಾಯಪಟ್ಟಣ ರಾಗಿ ಖರೀದಿ ಕೇಂದ್ರದ ಶಾಖಾ ವ್ಯವಸ್ಥಾಪಕ ಶಶಿಕಾಂತ್ ಮನವಿ ತಿಳಿಸಿದರು.

## ನಾಲ್ವರಿಗೆ ಕಚ್ಚಿ ಗಾಯಗೊಳಿಸಿದ ನಾಯಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಲಕ್ಷ್ಮೀಪುರ ಗ್ರಾಮದಲ್ಲಿ ನಾಯಿಯೊಂದು ಒಬ್ಬ ಬಾಲಕ ಹಾಗೂ ಇಬ್ಬರು ವೃದ್ಧರು ಸೇರಿದಂತೆ ನಾಲ್ವರಿಗೆ ಕಚ್ಚಿ ಗಾಯಗೊಳಿಸಿದೆ.

ಸೋಮವಾರ ರಾತ್ರಿ ಊಟ ಮುಗಿಸಿಕೊಂಡು ಮನೆ ಮುಂದೆ ಆಟವಾಡುತ್ತಿದ್ದ ಬಾಲಕ ಚಿರು ಎಂಬಾತನ ಮೇಲೆ ಹಠಾತ್ ನಾಯಿ ಎರಗಿ ಕಾಲಿಗೆ ಕಚ್ಚಿದೆ. ಗಾಬರಿಯಿಂದ ಕೂಗಿದ ಬಾಲಕನ ರಕ್ಷಣೆಗೆ ಬಂದ ಪೋಷಕ ಪರಮೇಶ, ಜವರಯ್ಯ ಮತ್ತು ಜ್ಯೋತಿ ಇವರಿಗೂ ಅಟ್ಟಾಡಿಸಿ ಕೈ, ಕಾಲುಗಳಿಗೆ ಕಚ್ಚಿದೆ. ಬಿದ್ದ ಜವರಯ್ಯನ ಕಣ್ಣಿನ ಸಮೀಪವೂ ಕಚ್ಚಿದ ಗಾಯವಾಗಿದೆ. ಎಲ್ಲರೂ ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಇತ್ತೀಚೆಗೆ ನಾಯಿಗಳ ಉಪಟಳ ಗ್ರಾಮದಲ್ಲಿ ಅತಿಯಾಗಿದೆ.

ಈ ಹಿಂದೆಯೇ ಗ್ರಾಮದ



ಚುನಾಯಿತ ಪ್ರತಿನಿಧಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ರಾತ್ರಿ ವೇಳೆ ತಿರುಗಾಡಲು ಹೆದರುವಂತಾಗಿದೆ. ಬೆಳಗಿನ ನಸುಕಿನಲ್ಲೂ ಮನೆ ಹೊರಗೆ ಬರಲಾಗದು. ನಾಯಿಗಳು ರಾತ್ರಿ ಇಡೀ ಬೊಗಳುವ ಶಬ್ದಕ್ಕೆ ನಿದ್ರಿಸ ಲಾಗದು. ಸಮಸ್ಯೆ ಕುರಿತು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಇದೀಗ ಶ್ವಾನ ಕಡಿತದಿಂದ ನರಳುವಂತಾಗಿದೆ.

ಸೂಕ್ತ ಪರಿಹಾರ ನೀಡುವಂತೆ ಐಚನಹಳ್ಳಿ ಗ್ರಾಪಂಗೆ ಮನವಿ ನೀಡುತ್ತೇವೆ. ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಗ್ರಾಮದಲ್ಲಿ ನಾಯಿಗಳನ್ನು ಹಿಡಿದು ಬೇರೆಡೆಗೆ ಸ್ಥಳಾಂತರಗೊಳಿಸಲು ಮುಂದಾಗಲಿ ಎಂದು ಗ್ರಾಮದ ಮುಖಂಡ ಚಲುವಯ್ಯ ಅವರು ಒತ್ತಾಯಿಸಿದ್ದಾರೆ.

## ನಾಗಪುರದಲ್ಲಿನ ದೀಕ್ಷಾ ಭೂಮಿಗೆ ಪ್ರಯಾಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಬೌದ್ಧ ಧರ್ಮದ ದೀಕ್ಷೆ ಪಡೆದ ಮಹಾರಾಷ್ಟ್ರದ ನಾಗಪುರದಲ್ಲಿನ ದೀಕ್ಷಾ ಭೂಮಿ ಯಾತ್ರೆಗೆ ತಾಲೂಕಿನಿಂದ 38 ಯಾತ್ರಾರ್ಥಿಗಳು ಪ್ರಯಾಣ ಹೊರಟಿದ್ದು, ಅವರನ್ನು ಶಾಸಕ ಸಿ.ಎನ್.ಬಾಲಕೃಷ್ಣ ಶುಭ ಕೋರಿ ಬೀಳ್ಕೊಟ್ಟರು.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿರುವ ನಾಗಪುರ ದೀಕ್ಷಾಭೂಮಿ ಯಾತ್ರೆಗೆ ತಾಲ್ಲೂಕಿನ ವಿವಿಧ ಗ್ರಾಮಗಳ 38 ಮಂದಿ ಯಾತ್ರಾರ್ಥಿಗಳು ಆರಂಭಿಸಿರುವ ಪ್ರಯಾಣದ ಬಸ್‌ಗೆ ಮಂಗಳವಾರ ಶಾಸಕ ಬಾಲಕೃಷ್ಣ ತಾಲೂಕು ಕಚೇರಿ ಮುಂಭಾಗದಲ್ಲಿ ಪೂಜೆ ಸಲ್ಲಿಸಿ ಎಲ್ಲ ಯಾತ್ರಾರ್ಥಿಗಳಿಗೂ ಶುಭ ಕೋರಿದರು.

ನಂತರ ಮಾತನಾಡಿದ ಅವರು, ಬೇರೆ ಬೇರೆ ಧರ್ಮದವರು ವಿವಿಧ ಕ್ಷೇತ್ರಗಳಿಗೆ ಯಾತ್ರೆ ಮಾಡುವ



ಮಾದರಿಯಲ್ಲಿಯೇ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಅನುಯಾಯಿಗಳು ಪ್ರತಿ ವರ್ಷ ಅಕ್ಟೋಬರ್ ತಿಂಗಳಲ್ಲಿ ನಾಗಪುರದಲ್ಲಿ ನಡೆಯುವ ದಮ್ಮ ಪ್ರವರ್ತನಾ ದಿನ ಕಾರ್ಯಕ್ರಮಕ್ಕೆ ದೀಕ್ಷಾ ಯಾತ್ರೆ ಕೈಗೊಳ್ಳುವುದು ವಾಡಿಕೆ. ದಮ್ಮ ಪ್ರವರ್ತನಾ ದಿನ ಕಾರ್ಯಕ್ರಮಕ್ಕೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಬಾಬಾ ಸಾಹೇಬ ಅಂಬೇಡ್ಕರ್ ಅವರ ಅನುಯಾಯಿಗಳನ್ನು ಪ್ರತಿ ವರ್ಷವೂ ದೀಕ್ಷಾಯಾತ್ರೆಗೆ ಕಳುಹಿಸಲಾಗುತ್ತಿದೆ. ಈ ವರ್ಷ ಚನ್ನರಾಯಪಟ್ಟಣ ತಾಲ್ಲೂಕಿನಿಂದ 38 ಹಾಗೂ ಹೊಳೆನರಸೀಪುರದಿಂದ 5 ಅನುಯಾಯಿಗಳನ್ನು ನಾಗಪುರ ದೀಕ್ಷಾ ಯಾತ್ರೆಗೆ ಕಳುಹಿಸುತ್ತಿರುವುದಾಗಿ ಅವರು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಡಿ.ಆರ್. ತ್ಯಾಗರಾಜ್, ಕಚೇರಿ ಅಧೀಕ್ಷಕ ಮೋಹನ್, ದಲಿತ ಮುಖಂಡರಾದ ಪ್ರಕಾಶ್ ವಿರುಪಾಕ್ಷಪುರ, ರಂಗಸ್ವಾಮಿ ಕಲ್ಕೇರೆ, ಯೋಗೀಶ್ ಗುರಿಗಾರನಹಳ್ಳಿ, ಸಿಆರ್‌ಪಿ ಮಲ್ಲೇಶ್, ಪುಟ್ಟಸೋಮಣ್ಣ, ಪರಮೇಶ್, ರಂಗಪ್ಪ, ನಾಗರಾಜು, ದೇವರಾಜ್, ಮಂಜಯ್ಯ, ಅಣ್ಣಮರಿ, ರಘು, ವಿ.ಆರ್.ಮಂಜಣ್ಣ ಇದ್ದರು.


ಮೈಸೂರು ದಸರಾ
ಕ್ರಿ.ಶ. 1610 ರಿಂದ ಆಚರಣೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಲಾಲ್ ಬಹದ್ದೂರ್ ಶಾಸ್ತ್ರಿಯವರ
121ನೇ ಜನ್ಮ ದಿನಾಚರಣೆ
ದಸರಾ
ಅಂದರೆ
ಅಸತ್ಯದ ಮೇಲೆ
ಸತ್ಯದ
ಜಯ
ವಿಶ್ವ ವಿಖ್ಯಾತ
ಮೈಸೂರು ದಸರಾ
ನಾಡ ಹಬ್ಬ - 2025
ರಾಷ್ಟ್ರಪಿತ
ಮಹಾತ್ಮ ಗಾಂಧೀಜಿ
ಅವರ 156ನೇ ಜನ್ಮ ದಿನಾಚರಣೆ
2ನೇ ಅಕ್ಟೋಬರ್ 2025
ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ
156ನೇ ಜನ್ಮದಿನದ ಅಂಗವಾಗಿ
ಅವರ ಪ್ರತಿಮೆಗೆ ಗೌರವ ಸಮರ್ಪಣೆ
ದಿನಾಂಕ: 02-10-2025, ಗುರುವಾರ
ಬೆಳಿಗ್ಗೆ 8:30 ಕ್ಕೆ | ಗಾಂಧಿ ಚೌಕ, ಮೈಸೂರು
ನಂದಿಧ್ವಜ ಪೂಜೆ
(ಬಲರಾಮ ದ್ವಾರ, ಅರಮನೆ ಆವರಣ)
ದಿನಾಂಕ: 02-10-2025, ಗುರುವಾರ
ಮಧ್ಯಾಹ್ನ 1:00 ರಿಂದ 1:18 ರವರೆಗೆ
ಸಲ್ಲುವ ಶುಭ ಧನುರ್ ಲಗ್ನದಲ್ಲಿ
ವಿಜಯದಶಮಿ ಮೆರವಣಿಗೆ
(ಅರಮನೆ ಒಳಾಂಗಣ)
ದಿನಾಂಕ: 02-10-2025, ಗುರುವಾರ
ಸಂಜೆ: 4:42 ರಿಂದ 5:06 ರವರೆಗೆ
ಸಲ್ಲುವ ಶುಭ ಕುಂಭ ಲಗ್ನದಲ್ಲಿ
ಪಂಜಿನ ಕವಾಯತು
(ಟಾರ್ಚ್ ಲೈಟ್ ಪೆರೇಡ್)
ದಿನಾಂಕ: 02-10-2025, ಗುರುವಾರ | ಸಮಯ: ಸಂಜೆ 7:00 ಗಂಟೆಗೆ
ಸ್ಥಳ: ಬನ್ನಿ ಮಂಟಪ ಮೈದಾನ
ನಾಡಹಬ್ಬ ದಸರಾದ
ಶುಭಾಶಯಗಳು
ಕರ್ನಾಟಕದ ನವ ನಿರ್ಮಾಣಕ್ಕೆ
ಗ್ಯಾರಂಟಿ ಸರ್ಕಾರ
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ
10 kg
ಗೃಹಜ್ಯೋತಿ
ಪ್ರತಿ ಮನೆಗೆ 200
ಗೃಹಲಕ್ಷ್ಮಿ
₹2000
ಯುವನಿಧಿ
₹3000 | ₹1500
ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು
- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ

